ಜನಮನದ ದನಿ
# ಪ್ರಜೋದಯ
ಸಂಪಾದಕ : ಜೆ.ಆರ್. ಕೆಂಚೇಗೌಡ

06 ನವೆಂಬರ್ 2025 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 236 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ದಕ್ಷಿಣ ಆಫ್ರಿಕಾ ವಿರುದ್ಧ 2 ಪಂದ್ಯಗಳ ಟೆಸ್ಟ್ ಸರಣಿಗೆ ಭಾರತ ತಂಡವನ್ನು ಬುಧವಾರ ಪ್ರಕಟಿಸಲಾಗಿದ್ದು, ಸ್ಟಾರ್ ವಿಕೆಟ್ ಕೀಪರ್ ರಿಷಭ್ ಪಂತ್ ಅವರು ಬಹುನಿರೀಕ್ಷಿತ ಪುನರಾಗಮನ ಮಾಡಿದ್ದಾರೆ.



ಸಂತೋಷದ ಹಾರ್ಮೋನುಗಳು » 2



ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷೆ ವೇಳಾಪಟ್ಟಿ ಪ್ರಕಟ » 3



ಗ್ಯಾರಂಟಿ ಯೋಜನೆ : ಜಿಲ್ಲೆಯಲ್ಲಿ ಸಾವಿರಾರು ಕೋ.ರೂ.ವಿನಿಯೋಗ » 4

# ಕರ್ನಾಟಕದಂತೆ ಹರಿಯಾಣದಲ್ಲೂ ಮತ ಕಳ್ಳತನ

## 25 ಲಕ್ಷ ಮತ ಕಳವು, 5.21 ಲಕ್ಷ ನಕಲಿ ಮತದಾರರು | ರಾಹುಲ್ ಗಾಂಧಿ ಆರೋಪ

• ಪ್ರಜೋದಯ ವರದಿ

**ನವದೆಹಲಿ:** ಬಿಹಾರ ವಿಧಾನಸಭೆ ಚುನಾವಣೆಯ ಮೊದಲ ಹಂತದ ಮತದಾನದ ಹೊತ್ತಿನಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರ ಚುನಾವಣಾ ಆಯೋಗ ಮತ್ತು ಬಿಜೆಪಿ ವಿರುದ್ಧ ಮತ ಕಳ್ಳತನದ ಮತ್ತೊಂದು ಆರೋಪ ಮಾಡಿದ್ದಾರೆ.

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ 5. 21 ಲಕ್ಷ ನಕಲಿ ಮತದಾರರು, 93, 174 ಅಮಾನ್ಯ ಮತದಾರರು ಮತ್ತು 19.26 ಲಕ್ಷ ಬೃಹತ್ ಮತದಾರರು ಸೇರಿ 25 ಲಕ್ಷ ಮತಗಳನ್ನು ಕಳವು ಮಾಡಲಾಗಿದೆ ಎಂದು ಹೇಳಿದ್ದಾರೆ.

ಹರಿಯಾಣ ವಿಧಾನಸಭೆ ಚುನಾವಣೆ ವೇಳೆ ಎರಡು ಬೂತ್‌ಗಳಲ್ಲಿ 223 ಬಾರಿ ಮತ ಚಲಾಯಿಸಿದ ಮಹಿಳೆಯ




ಉದಾಹರಣೆಯನ್ನು ರಾಹುಲ್ ಗಾಂಧಿ ಎತ್ತಿ ತೋರಿಸಿದರು. ಒಂದೇ ಫೋಟೋ ಬಳಸಿ ಹತ್ತು ಬೂತ್‌ಗಳಲ್ಲಿ 22 ಬಾರಿ ಮತ ಚಲಾಯಿಸಿದ ಬ್ರೆಜಿಲ್ ಮಾದರಿಯ ಉದಾಹರಣೆಯನ್ನೂ ಅವರು ನೀಡಿದರು. ಇದಕ್ಕಾಗಿ ಚುನಾವಣಾ ಆಯೋಗವು ಸಿಸಿಟಿವಿ ದಾಖಲೆಗಳನ್ನು ನಾಶಪಡಿಸುತ್ತದೆ ಎಂದು ಆರೋಪಿಸಿದರು.

ಹರಿಯಾಣ ವಿಧಾನಸಭೆಯ ಚುನಾವಣಾ ಪಟ್ಟಿಯಲ್ಲಿ ನಕಲಿ ಫೋಟೋಗಳನ್ನು ಹೊಂದಿರುವ 1.24 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ. ನಾನು ಈ ಸಂದರ್ಭದಲ್ಲಿ ಚುನಾವಣಾ ಆಯೋಗವನ್ನು, ಭಾರತದಲ್ಲಿನ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಪ್ರಶ್ನಿಸುತ್ತಿದ್ದೇನೆ. ಇಂದು ನಾನು ಮಾಡುತ್ತಿರುವ ಆರೋಪ ನೂರಕ್ಕೆ ನೂರರಷ್ಟು ಸತ್ಯ. ವಿರೋಧ ಪಕ್ಷದ ನಾಯಕನಾಗಿ ಸಂಪೂರ್ಣ ಜವಾಬ್ದಾರಿಯಿಂದ ಹೇಳಿಕೆಗಳನ್ನು ನೀಡುತ್ತಿದ್ದೇನೆಂದು ರಾಹುಲ್ ಗಾಂಧಿ ಪುನರುಚ್ಚರಿಸಿದರು.

### ಆಧಾರ ರಹಿತ ಎಂದ ಚುನಾವಣಾ ಆಯೋಗ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಮತಗಳ್ಳತನ ಆರೋಪವು ಆಧಾರರಹಿತ. ಹರಿಯಾಣದಲ್ಲಿ ಮತದಾರರ ಪಟ್ಟಿಯ ವಿರುದ್ಧ ಯಾವುದೇ ಮೇಲ್ಮನವಿಗಳು ದಾಖಲಾಗಿಲ್ಲ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ರಾಹುಲ್ ಗಾಂಧಿ ಹೇಳಿಕೆಗೆ ಚುನಾವಣಾ ಆಯೋಗದ ಅಧಿಕಾರಿಗಳು ಪ್ರತಿಕ್ರಿಯಿಸಿ, 2024ರ ಅಕ್ಟೋಬರ್‌ನಲ್ಲಿ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಹಲವಾರು ಬಾರಿ ಮತ ಚಲಾಯಿಸಿದ ಮತದಾರರನ್ನು ಕಾಂಗ್ರೆಸ್‌ನ ಬೂತ್ ಏಜೆಂಟ್‌ಗಳು ಏಕೆ ಗುರುತಿಸಲಿಲ್ಲವೆಂದು ಚುನಾವಣಾ ಆಯೋಗದ ಅಧಿಕಾರಿಗಳು ಪ್ರಶ್ನಿಸಿದ್ದಾರೆ. ಪರಿಷ್ಕರಣೆಯ ಸಮಯದಲ್ಲಿ ಕಾಂಗ್ರೆಸ್ ನ ಬೂತ್ ಮಟ್ಟದ ಏಜೆಂಟ್‌ಗಳು ಯಾವುದೇ ಅರ್ಜಿ ಮತ್ತು ಆಕ್ಷೇಪಣೆಗಳನ್ನು ಏಕೆ ಎತ್ತಲಿಲ್ಲ ಎಂದು ರಾಹುಲ್ ಗಾಂಧಿಯವರ ಆರೋಪಕ್ಕೆ ಚುನಾವಣಾ ಅಧಿಕಾರಿ ತಿರುಗೇಟು ನೀಡಿದ್ದಾರೆ.

### ಪ್ರಜಾಪ್ರಭುತ್ವದ ಕತ್ತು ಹಿಸುಕುತ್ತಿದೆ ಚುನಾವಣಾ ಆಯೋಗ: ಸಿಎಂ

**ಬೆಂಗಳೂರು:** ದೇಶದ ಚುನಾವಣಾ ವ್ಯವಸ್ಥೆಯಲ್ಲಿ ನಡೆಯುತ್ತಿರುವ ವ್ಯವಸ್ಥಿತ ಅಕ್ರಮಗಳ ಕರಾಳ ಮುಖವನ್ನು ಲೋಕಸಭೆಯ ವಿಪಕ್ಷ ನಾಯಕರಾದ ರಾಹುಲ್ ಗಾಂಧಿ ಅವರು ಮತ್ತೊಮ್ಮೆ ಬಹಿರಂಗಪಡಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

ಕರ್ನಾಟಕದಂತೆ ಹರಿಯಾಣ ಚುನಾವಣೆಯಲ್ಲೂ ಮತಕಳ್ಳತನ ನಡೆದಿದೆ. 25 ಲಕ್ಷ ಮತದಾರರು ನಕಲಿ ಮತ್ತು ಕಳೆದ ವರ್ಷ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಮತಗಳ್ಳತನ ನಡೆದಿದೆ ಎಂಬ ರಾಹುಲ್ ಗಾಂಧಿ ಆರೋಪವನ್ನು ಸಮರ್ಥಿಸಿಕೊಂಡಿದ್ದಾರೆ.

# ಕಾಂಪೌಂಡ್ ಒಡೆದು ರೈತರಿಗೆ ದಾರಿ ಮಾಡಿ

## ವಿಮಾನ ನಿಲ್ದಾಣದ ಸುತ್ತ ರೈತರಿಗೆ ಸಮಸ್ಯೆ: ಕೆಐಡಿಬಿ ಅಧಿಕಾರಿಗಳಿಗೆ ಡಿಸಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ಬೂವನಹಳ್ಳಿ ವಿಮಾನ ನಿಲ್ದಾಣದ ಸುತ್ತ ಕಾಂಪೌಂಡ್ ನಿರ್ಮಾಣದಿಂದ ರೈತರು ತಮ್ಮ ಜಮೀನಿಗೆ ತೆರಳಲು ತೊಂದರೆ ಉಂಟಾಗುತ್ತಿರುವ ಹಿನ್ನಲೆ ಕೂಡಲೇ ತಡೆಗೋಡೆ ತೆರವುಗೊಳಿಸಿ ಸುಗಮ ದಾರಿಗೆ ಅನುವು ಮಾಡಿಕೊಡುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಕೆಐಡಿಬಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರ್ನಾಟಕ ಕೈಗಾರಿಕಾ ಮೂಲ ಸೌಕರ್ಯ ಅಭಿವೃದ್ಧಿ ನಿಗಮ (ಕೆಐಡಿಬಿ), ರೈತರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ವಿಮಾನ ನಿಲ್ದಾಣದ ಆವರಣದಿಂದ ಹೊರಗೆ ನಿರ್ದಿಷ್ಟ ಬಫರ್ ವಲಯ ಮತ್ತು ಸರ್ವೀಸ್ ರಸ್ತೆ ಇರಬೇಕು. ಆದರೆ, ಹಾಸನ ವಿಮಾನ ನಿಲ್ದಾಣದ ನಿರ್ಮಾಣದಲ್ಲಿ ಈ ನಿಯಮ ಪಾಲನೆಯಾಗದೆ, ರೈತರು ತಮ್ಮ ಜಮೀನು ಗಳಿಗೆ



ಹೋಗಿ ಬರಲು ತೊಂದರೆ ಅನುಭವಿಸುತ್ತಿರುವುದು ಕಂಡು ಬಂದಿದೆ. ಹೀಗಾಗಿ ಕಾಂಪೌಂಡ್ ತೆರವುಗೊಳಿಸುವಂತೆ ನಿರ್ದೇಶನ ನೀಡಿದರು.

ರೈತರಿಗೆ ಬದಲಿ ದಾರಿ ಸಿಗುವವರೆಗೆ ಕಾಂಪೌಂಡ್ ಗೋಡೆ ತೆರವಿಗೆ ಕ್ರಮ ಕೈಗೊಳ್ಳಬೇಕು. ಮುಂದಿನ ಸೋಮವಾರದೊಳಗೆ ಈ ಬಗ್ಗೆ ಸ್ಪಷ್ಟ ವರದಿ ನೀಡಬೇಕೆಂದು ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರಿಗೆ ಸೂಚಿಸಿದರು. ಸಭೆಯಲ್ಲಿ ಕೆಐಡಿಬಿ ಅಧಿಕಾರಿಗಳು 1966 ರಿಂದ ನಡೆದ ಭೂಸ್ವಾಧೀನದ ಪ್ರಕ್ರಿಯೆಯ ವಿವರ ನೀಡಿದರು. ಒಟ್ಟು 12 ಕಿಲೋ ಮೀಟರ್ ಉದ್ದದ ಗೋಡೆ ನಿರ್ಮಾಣಕ್ಕೆ ಯೋಜನೆ ಇದ್ದರೂ, ಸ್ವಾಧೀನದ ಗೊಂದಲಗಳಿಂದ ಕೇವಲ 6 ಕಿಮೀ ಭಾಗ ಮಾತ್ರ ನಿರ್ಮಾಣವಾಗಿದೆ ಎಂದು ಗುತ್ತಿಗೆದಾರರು ತಿಳಿಸಿದರು.

ಬೂವನಹಳ್ಳಿ, ದ್ಯಾವಲಾಪುರ, ಮೈಲನಹಳ್ಳಿ, ತೆಂಡಿಹಳ್ಳಿ ಹಾಗು ಲಕ್ಷ್ಮಿ ಸಾಗರದ ರೈತರು ತಮ್ಮ ಭೂಮಿಯ ಹಕ್ಕು, ಪರಿಹಾರ ಹಾಗು ದಾರಿ ಮುಚ್ಚಿರುವ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಕೆಲ ಭೂಮಿಗಳು ತಪ್ಪಾಗಿ ಸರ್ಕಾರಿ ಭೂಮಿಯಾಗಿ ದಾಖಲಾಗಿರುವುದರಿಂದ ಸಮಸ್ಯೆ ಉಂಟಾಗಿದೆ ಎಂದು ದೂರಿದರು.

ಅಪರ ಜಿಲ್ಲಾಧಿಕಾರಿ ವಿ. ಮಂಜುನಾಥ್, ತಹಶೀಲ್ದಾರ್ ಗೀತಾ, ಹಿರಿಯ ಪತ್ರಕರ್ತ ಆರ್.ಪಿ.ವೆಂಕಟೇಶಮೂರ್ತಿ, ರೈತರು ಹಾಜರಿದ್ದರು.

# ಅಕ್ರಮ ಮದ್ಯ ಮಾರಾಟ ತಡೆಗೆ ಹಲ್ಮಿಡಿ ಗ್ರಾಮಸ್ಥರ ಆಗ್ರಹ

• ಪ್ರಜೋದಯ ವರದಿ

**ಬೇಲೂರು:** ಕನ್ನಡದ ಪ್ರಥಮ ಶಿಲಾ ಶಾಸನ ದೊರೆತ ಹಲ್ಮಿಡಿ ಗ್ರಾಮದ ಕೆಲ ಮನೆಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದು, ಕಡಿವಾಣ ಹಾಕಬೇಕೆಂದು ಆಗ್ರಹಿಸಿ ಗಾಮಸ್ಥರು ಬುಧವಾರ ಅಬಕಾರಿ ನಿರೀಕ್ಷಕಿ ಅವರಿಗೆ ಮನವಿ ಸಲ್ಲಿಸಿದರು.

ಗ್ರಾಮದ ನೇತ್ರಾವತಿ ಅವರು ಮಾತನಾಡಿ, ಕನ್ನಡಕ್ಕೆ ಪ್ರಥಮ ಶಿಲಾ ಶಾಸನ ಕೊಟ್ಟಿರುವ ಹಲ್ಮಿಡಿ ಗ್ರಾಮಕ್ಕೆ ತನ್ನದೇಯಾದ ಸ್ಥಾನಮಾನವಿದೆ. ರಾಜ್ಯದ ಜನರು ಗ್ರಾಮದ ಕುರಿತು ಅತೀವ ಪ್ರೀತಿ ಹೊಂದಿದ್ದಾರೆ. ಈ ಊರು ನಾಡಿಗೆ ಮಾದರಿಯಾಗಿರಬೇಕು. ಗ್ರಾಮದ ಕೆಲವು ಮನೆಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದರಿಂದ ಶಾಂತಿಗೆ ಧಕ್ಕೆ ಬಂದಿದೆ. ಯುವಕರು, ವಯಸ್ಕರು ದಿನಪೂರ್ತಿ ನಶೆಯಲ್ಲಿರುತ್ತಾರೆ. ಮದ್ಯದ ಅಮಲಿನಲ್ಲಿ ಅಡ್ಡಾದಿಡ್ಡಿ ಬೈಕ್ ಓಡಿಸುವುದು, ಅಪಘಾತ, ಗಲಾಟೆ ಮಾಡುತ್ತಾರೆ. ಅದರಿಂದ ನೆಮ್ಮದಿ ಹಾಳಾಗಿದೆ. ಮಕ್ಕಳು, ಮಹಿಳೆಯರ ಮನೆಯಿಂದ ಹೊರ



ಬರಲು ಹಿಂದೇಟು ಹಾಕುವಂತಾಗಿದೆ ಎಂದರು.

ಹಲ್ಮಿಡಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದ ಕೂಲಿ ಕಾರ್ಮಿಕರೇ ಹೆಚ್ಚಿದ್ದಾರೆ. ಗ್ರಾಮದಲ್ಲಿ ನಿತ್ಯ ಬೆಳ್ಳಂ ಬೆಳಿಗ್ಗೆಯೇ ಆರೇಳು ಮನೆಗಳಲ್ಲಿ ಮದ್ಯವನ್ನು ರಾಜಾರೋಷವಾಗಿ ಮಾರಾಟ ಮಾಡುತ್ತಿರುವುದರಿಂದ ಕುಡಿದವರು ಮನೆಗೆ ಬಂದು ಹೆಂಡತಿ ಮಕ್ಕಳೊಂದಿಗೆ ಜಗಳವಾಡಿ ಕಿರುಕುಳ ನೀಡುತ್ತಾರೆ. ಮಕ್ಕಳು ಶಾಲೆಗೆ ಹೋಗದ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ಸಮಯದಲ್ಲಿ ಮಕ್ಕಳ ವ್ಯಾಸಂಗಕ್ಕೆ ತೊಂದರೆಯಾಗುತ್ತಿದೆ. ಕನ್ನಡ ಶಿಲಾಶಾಸನ ನೋಡಲು ಪ್ರವಾಸಿಗರು ಬಂದರೆ ಅವರ ವಾಹನ ತಡೆದು ಹಣ ವಸೂಲಿ ಮಾಡುವುದಲ್ಲದೆ ಮಹಿಳೆಯರಿಗೆ ಹಿಂದೆ ನೀಡುವುದರಿಂದ ಹಲ್ಮಿಡಿ ಗ್ರಾಮಕ್ಕೆ ಕೆಟ್ಟ ಹೆಸರು ಬರುತ್ತಿದೆ. ಎಷ್ಟೋ ಕುಟುಂಬಗಳು ಬೀದಿಗೆ ಬಿದ್ದಿವೆ. ಈ ವಿಚಾರವಾಗಿ ಹಲವಾರು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ ಎಂದರು.

ಅಬಕಾರಿ ನಿರೀಕ್ಷಕಿ ಅಪೂರ್ವ ಅವರು ಮಾತನಾಡಿ, ಅಕ್ರಮ ಮದ್ಯ ಮಾರಾಟದ ಬಗ್ಗೆ ಆರೋಪಗಳು ಕೇಳಿ ಬಂದಿದ್ದು, ಶೀಘ್ರದಲ್ಲೇ ಹಲ್ಮಿಡಿ ಗ್ರಾಮದಲ್ಲಿ ಮದ್ಯ ಮಾರಾಟ ಮಾಡುವವರ ವಿರುದ್ಧ ಕ್ರಮ ದಾಖಲಿಸಲಾಗುವುದೆಂದು ಭರವಸೆ ನೀಡಿದರು. ಹಲ್ಮಿಡಿ ಗ್ರಾಮಸ್ಥರಾದ ಮಹೇಶ್, ಕುಮಾರ್ ಇತರರಿದ್ದರು.

# ಆಂತರಿಕಾ ದೂರು ನಿವಾರಣಾ ಸಮಿತಿ ರಚಿಸಿ : ಡಾ. ನಾಗಲಕ್ಷ್ಮಿ ಚೌಧರಿ

• ಪ್ರಜೋದಯ ವರದಿ

**ಹಾಸನ :** ಸರ್ಕಾರಿ ಕಚೇರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಮಹಿಳೆಯರು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಲೈಂಗಿಕ ದೌರ್ಜನ್ಯ ತಡೆಯಲು ಸುಪ್ರೀಂ ಕೋರ್ಟ್ ಆದೇಶದಂತೆ ಕಡ್ಡಾಯವಾಗಿ ಆಂತರಿಕಾ ದೂರು ನಿವಾರಣಾ ಸಮಿತಿ ರಚಿಸುವಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ॥ ನಾಗಲಕ್ಷ್ಮಿ ಚೌಧರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಬುಧವಾರ ಮಹಿಳಾ ಸ್ಪಂದನಾ ಮತ್ತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸ್ವೀಕೃತವಾದ ದೂರುಗಳನ್ನು ಪರಿಹರಿಸಲು ಸೂಕ್ಷ್ಮವಾಗಿ ಗಮನಿಸಿ ಸಮರ್ಥ ನಿರ್ಧಾರ ಕೈಗೊಳ್ಳಬೇಕು. ಸಂಘ-ಸಂಸ್ಥೆಗಳು ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಮಹಿಳೆಯರ ಸುರಕ್ಷತೆಗಾಗಿ ಸಮಿತಿ ರಚನೆ ಮಾಡಿದ್ದರಾ ಮತ್ತು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಯುತ್ತಿದೆಯಾ ಎಂದು




ಪರಿಶೀಲಿಸಬೇಕೆಂದು ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ವರ್ಷದಲ್ಲಿ 279 ಕಾಣೆಯಾದ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಪ್ರಕರಣಗಳು ಪೊಲೀಸ್ ಇಲಾಖೆಯಲ್ಲಿ ದಾಖಲಾಗಿದ್ದು, 236 ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ಉಳಿದ 43 ಪ್ರಕರಣಗಳನ್ನು ಶೀಘ್ರವಾಗಿ ಪತ್ತೆ ಹಚ್ಚಲು ಕ್ರಮವಹಿಸಬೇಕು. ಇತ್ತೀಚೆಗೆ ವಿವಾಹ ವಿಚ್ಛೇಧನ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮದುವೆಗೆ ಮುನ್ನ ಹುಡುಗ-ಹುಡುಗಿಗೆ ಸಮಾಲೋಚನೆ ನಡೆಸುವ ನಿಟ್ಟಿನಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದಿಂದ ನನ್ನ-ನಿನ್ನ ಕನಸು ಎಂಬ ಕಾರ್ಯಕ್ರಮ ಜಾರಿಗೆ ತರಲಾಗುತ್ತಿದೆ. ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು ಇನ್ನೂ ಯಾವ ಜಿಲ್ಲೆಯಲ್ಲಿಯೂ ಆರಂಭಿಸಿಲ್ಲ, ಹಾಸನ ಜಿಲ್ಲೆಯಿಂದಲೇ ಮೊದಲು ಪ್ರಾರಂಭವಾಗಲಿ ಎಂದು ತಿಳಿಸಿದರು.

ಇಂದಿನ ದಿನಗಳಲ್ಲಿ ಯುವಕ-ಯುವತಿಯರು ಮದುವೆಯಾಗಿ ಒಂದು ವರ್ಷದೊಳಗೆ ವಿಚ್ಛೇದನ ತೆಗೆದುಕೊಳ್ಳುವ ಸ್ಥಿತಿಗೆ ತಲುಪುತ್ತಿದ್ದಾರೆ. ಅವರಲ್ಲಿ ತಾಳ್ಮೆ ಕಡಿಮೆ ಇರುವುದು ಕಂಡು ಬರುತ್ತಿದೆ. ಅದನ್ನು ತಪ್ಪಿಸಿ ಭದ್ರ ಬುನಾದಿ ಹಾಕುವ ನಿಟ್ಟಿನಲ್ಲಿ ಅರಿವು ಮೂಡಿಸಬೇಕು. ಆ ಕಾರಣಕ್ಕೆ ಮದುವೆಯ ಪೂರ್ವದಲ್ಲಿ ಯುವಕ-ಯುವತಿಯರ ತಂದೆ-ತಾಯಿಗಳು ಚರ್ಚೆ ಮಾಡಿ ಎರಡು ಕುಟುಂಬಗಳು ಮದುವೆ ಒಪ್ಪಂದ ಮಾಡಿಕೊಂಡು ಮುಂದುವರೆಯಬೇಕು. ಆಗ ಸಮಾಜದಲ್ಲಿ ಸಂಸ್ಕಾರಯುತವಾಗಿ ಜೀವನ ನಡೆಸಲು ಸಾಧ್ಯವೆಂದರು.

ಅಸಂಘಟಿತ ಕಾರ್ಮಿಕರು ದೂರು ನೀಡಲು ಸಹಕಾರಿಯಾಗುವಂತೆ ಜಿಲ್ಲಾ ಮಟ್ಟದ ದೂರು ನಿವಾರಣಾ ಸಮಿತಿಯ ಕುರಿತು ಜಿಲ್ಲಾಧಿಕಾರಿ ಕಚೇರಿ ನಾಮಫಲಕದಲ್ಲಿ ಅಳವಡಿಸಬೇಕು. ನಿನ್ನೆ ಭೇಟಿ ನೀಡಿದ ಸಂದರ್ಭದಲ್ಲಿ ಗಮನಿಸಿದ್ದು, ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ ಗೋಡೆ ಕುಸಿಯುವ ಹಂತದಲ್ಲಿದೆ. ಅವುಗಳ ಬಗ್ಗೆ ಗಮನಹರಿಸಿ ಮಕ್ಕಳಿಗೆ ತೊಂದರೆಯಾಗದಂತೆ ಕ್ರಮವಹಿಸಬೇಕು. ಹೆಣ್ಣು ಮಕ್ಕಳ ರಕ್ಷಣೆಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಸ್ಪಂದನ ಕಾರ್ಯಕ್ರಮ ನಡೆಯುತ್ತದೆ. ಅಲ್ಲಿ ಸ್ಪಂದಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರ ನಡೆಯುವ ಜನ ಸ್ಪಂದನ ಕಾರ್ಯಕ್ರಮದಲ್ಲಿ ದೂರು ಸಲ್ಲಿಸಬಹುದು. ಶಾಲಾ, ಕಾಲೇಜುಗಳಲ್ಲಿ ಮಕ್ಕಳಿಗೆ ಬ್ಯಾಡ್ ಮತ್ತು ಗುಡ್ ಟಚ್ ಬಗ್ಗೆ ಜಾಗೃತಿ ಮೂಡಿಸಬೇಕು. ತುರ್ತು ಸಹಾಯವಾಣಿ ಸಂಖ್ಯೆಯನ್ನು ಫಲಕಗಳಲ್ಲಿ ಅಳವಡಿಸಬೇಕು. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಬಸ್ ನಿಲುಗಡೆಗೆ ಅವಕಾಶ ಕಲ್ಪಿಸಲು ಕ್ರಮವಹಿಸಲು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಪ್ರವಾಸದ ಸಂದರ್ಭದಲ್ಲಿ ಸಂಪೂರ್ಣ ಸಹಕಾರ ನೀಡಿದ್ದಾರೆಂದು ಜಿಲ್ಲಾಡಳಿತಕ್ಕೆ ಧನ್ಯವಾದಗಳನ್ನು ಸಲ್ಲಿಸಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು,ಮಾಹಿಳಾ ಆಯೋಗದ ಕಾರ್ಯದರ್ಶಿ ರೂಪ ಇದ್ದರು.

# ಆಂತರಿಕ ದೂರು ಸಮಿತಿ ರಚನೆ: ದೇಶದಲ್ಲಿ ರಾಜ್ಯಕ್ಕೆ 2ನೇ ಸ್ಥಾನ

• ಪ್ರಜೋದಯ ವರದಿ

**ಹಾಸನ :** ಭಾರತ ದೇಶದಲ್ಲಿ ಆಂತರಿಕ ದೂರು ಸಮಿತಿಗಳನ್ನು ರಚನೆ ಮಾಡುವುದರಲ್ಲಿ ಕರ್ನಾಟಕ ರಾಜ್ಯ ಎರಡನೇ ಸ್ಥಾನದಲ್ಲಿದೆ. 78,000 ಕ್ಕೂ ಹೆಚ್ಚು ಆಂತರಿಕ ದೂರು ಸಮಿತಿಗಳನ್ನು ರಚನೆ ಮಾಡಿದ್ದೇವೆ. ಅವುಗಳ ಕುರಿತಾಗಿ ಅರಿವು ಮೂಡಿಸುವುದು ಕೂಡ ಅತ್ಯಗತ್ಯವಾಗಿದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ಡಾ. ನಾಗಲಕ್ಷ್ಮಿ ಚೌಧರಿ ಅವರು ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಬುಧವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಸರ್ಕಾರಿ ಹಾಗೂ ಖಾಸಗಿ ಕಚೇರಿಗಳಲ್ಲಿ ಕಡ್ಡಾಯವಾಗಿ ಆಂತರಿಕ ದೂರು ಸಮಿತಿ ಇರಬೇಕು. ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಸಭೆ ಆಗಬೇಕು. ಅವರ ಸಮ್ಮುಖದಲ್ಲಿಯೇ ಕಡ್ಡಾಯವಾಗಿ ವಿಚಾರಣೆ ನಡೆಯಬೇಕು. ಪ್ರತಿ ಕಚೇರಿಗಳಲ್ಲಿ ದೂರು ಪೆಟ್ಟಿಗೆಗಳನ್ನು ಇಡಬೇಕು. ಜಿಲ್ಲೆಯಲ್ಲಿ 315 ಆಂತರಿಕ ದೂರು ಸಮಿತಿಗಳನ್ನು ರಚಿಸಲಾಗಿದೆ. ಇನ್ನು 69 ಬಾಕಿ ಇವೆ. ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಗೆ ಲೈಂಗಿಕ ದೌರ್ಜನ್ಯ ಆದಂತಹ ಸಂದರ್ಭದಲ್ಲಿ ಆಂತರಿಕ ದೂರು ಸಮಿತಿ ಬಹಳ ಕ್ರಿಯಾಶೀಲವಾಗಿ ಕೆಲಸ ಮಾಡಬೇಕು. ಕಾಲಕಾಲಕ್ಕೆ ಇವುಗಳು ಸರಿಯಾಗಿ ನಡೆದರೆ ಮಾತ್ರ ಜನರು ಎಚ್ಚೆತ್ತುಕೊಳ್ಳುತ್ತಾರೆ ಎಂದರು.

» ನಾಲ್ಕನೇ ಪುಟದಲ್ಲಿ

# ಶಾಸಕರಿಂದ ರೈಲ್ವೆ ರಿಚ್ ಪಾಯಿಂಟ್ ಸ್ಥಳ ಪರಿಶೀಲನೆ

• ಪ್ರಜೋದಯ ವರದಿ

**ಹಾಸನ:** ಆಲೂರು, ಸಕಲೇಶಪುರ ತಾಲ್ಲೂಕಿನ ವಿವಿಧೆಡೆಗಳಲ್ಲಿ ರೈಲ್ವೆ ರಿಚ್ ಪಾಯಿಂಟ್‌ಗಳಲ್ಲಿ ರೈತರು ತಮ್ಮ ಜಮೀನುಗಳಿಗೆ ತೆರಳಲು ತೊಂದರೆಯಾಗುತ್ತಿರುವ ಕುರಿತು ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ದೂರು ನೀಡಿದ ಹಿನ್ನಲೆ ಶಾಸಕ ಸಿಮೆಂಟ್ ಮಂಜು ಅವರು ಬುಧವಾರ ಸ್ಥಳ ಪರಿಶೀಲನೆ ನಡೆಸಿದರು.

ಆಲೂರು ತಾಲ್ಲೂಕಿನ ಯಡಿಯೂರು, ಹಳೇ ಆಲೂರು, ಮಡಬಲು, ಹೆದ್ದುರ್ಗ ರೈಲ್ವೆ ರಿಚ್ ಪಾಯಿಂಟ್ ಬಳಿ ಫ್ಲೈ ಓವರ್ ಮತ್ತು ಅಂಡರ್ ಪಾಸ್‌ಗಳ ನಿರ್ಮಾಣಕ್ಕೆ ಸ್ಥಳೀಯ ರೈತರು ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಿದ್ದರು. ಈ ಹಿನ್ನಲೆ ರೈಲ್ವೆ



ಇಲಾಖೆಯ ಪಿಡಬ್ಲ್ಯುಡಿ ವಿಭಾಗದ ಅಧಿಕಾರಿಗಳೊಂದಿಗೆ ಶಾಸಕರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ರೈಲ್ವೆ ಇಲಾಖೆ ಅಧಿಕಾರಿಗಳು, ಸ್ಥಳೀಯ ಮುಖಂಡರು ಹಾಗು ಗ್ರಾಮಸ್ಥರು ಹಾಜರಿದ್ದರು.

ಅದೇ ರೀತಿ ಸಕಲೇಶಪುರ ತಾಲ್ಲೂಕಿನ ಬಾಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಡೆಹಳ್ಳಿ, ಹಲಸುಲಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲಸುಲಿಗೆ ಗ್ರಾಮದ ಬಳಿಯ ರೈಲ್ವೆ ರಿಚ್ ಪಾಯಿಂಟ್‌ಗಳಲ್ಲಿ ರೈತರು ತಮ್ಮ ಜಮೀನುಗಳಿಗೆ ತೆರಳಲು ತೊಂದರೆಯಾಗುತ್ತಿದೆ ಎಂದು ದೂರು ನೀಡಿದ್ದರು. ಅಲ್ಲಿಗೂ ತೆರಳಿ ಪರಿಶೀಲನೆ ನಡೆಸಲಾಯಿತು.

# ಡಿ.13ಕ್ಕೆ ಹನುಮ ಜಯಂತಿ: ಪೂರ್ವಭಾವಿ ಸಭೆ

• ಪ್ರಜೋದಯ ವರದಿ

**ಬೇಲೂರು :** ಪಟ್ಟಣದಲ್ಲಿ ಡಿ.13 ರಂದು ಹಮ್ಮಿಕೊಂಡಿರುವ 13ನೇ ವರ್ಷದ ಹನುಮ ಜಯಂತಿ ಗೊಂದಲವಿಲ್ಲದೆ ಶಾಂತಿಯುತವಾಗಿ ಆಚರಿಸಬೇಕೆಂದು ಅರಸೀಕೆರೆ ಡಿವೈಎಸ್‌ಪಿ ಗೋಪಿ ಅವರು ಹೇಳಿದರು.

ಪಟ್ಟಣದ ಮಂಜುನಾಥ ಕಲ್ಯಾಣ ಮಂಟಪದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಳೆದ 12 ವರ್ಷಗಳಿಂದ ಗೊಂದಲಕ್ಕೆ ಅವಕಾಶ ನೀಡದೆ ಹನುಮ ಜಯಂತಿಯನ್ನು ಅರ್ಥಪೂರ್ಣವಾಗಿ, ಶಾಂತಿಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಈ ಬಾರಿಯೂ ಸಾವಿರಾರು ಭಕ್ತರು ಸೇರುವುದರಿಂದ ಅಹಿತಕರ ಘಟನೆಗಳಿಗೆ ಆಸ್ಪದ ಕೊಡದೆ ಎಲ್ಲರ ಸಹಕಾರ ಬೇಕು. ಪೊಲೀಸ್ ಇಲಾಖೆಯ ಹಲವು ಕಾನೂನು ಚೌಕಟ್ಟು



ಗಳಿದ್ದು, ಕಡ್ಡಾಯವಾಗಿ ಪಾಲಿಸಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಪಟ್ಟಣದಲ್ಲಿ ವಾಹನ ದಟ್ಟಣೆ ಉಂಟಾಗುತ್ತದೆ. ಜಯಂತಿ ಆಚರಣಾ ಸಮಿತಿಯವರೇ ಸ್ವಯಂ ಸೇವಕರನ್ನು ನಿಯೋಜಿಸಿ ವ್ಯವಸ್ಥೆ ಕಲ್ಪಿಸಬೇಕು. ನಿಗದಿತ ಸಮಯಕ್ಕೆ ಉತ್ಸವ ಪ್ರಾರಂಭಗೊಂಡು ಮುಕ್ತಾಯವಾಗಬೇಕು. ಏನೇ ತೊಂದರೆಯಾದರೂ ಸಮಿತಿಯವರು ಹೊಣೆಗಾರರಾಗುತ್ತಾರೆ. ಉತ್ಸವ ನಡೆಯುವ ದಾರಿಯಲ್ಲಿ ಕಡ್ಡಾಯ ವಾಗಿ ಡ್ರೋನ್ ಕ್ಯಾಮರಾ ಹಾಗು ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗುವುದು ಎಂದರು.

ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ ಅವರು ಮಾತನಾಡಿ, ಹನುಮ ಜಯಂತಿ ಉತ್ಸವದ ಮೆರವಣಿಗೆಯನ್ನು ಬೇಗ ಪ್ರಾರಂಭಿಸಬೇಕು.

» ನಾಲ್ಕನೇ ಪುಟದಲ್ಲಿ

# ನ.8 ರಂದು ಕನಕದಾಸ ಜಯಂತಿ

• ಪ್ರಜೋದಯ ವರದಿ

**ಹಾಸನ :** ಹಾಸನಾಂಬ ಕಲಾಕ್ಷೇತ್ರದಲ್ಲಿ ನ.8 ರಂದು ಬೆ.11 ಗಂಟೆಗೆ ಕನಕದಾಸ ಜಯಂತಿಯನ್ನು ಆಯೋಜಿಸಲಾಗಿದೆ. ಅಂದು ಬೆ.10.30 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ದಾಸಶ್ರೇಷ್ಠ ಶ್ರೀ ಕನಕದಾಸರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ಮೆರವಣಿಗೆಗೆ ಚಾಲನೆ ನೀಡಲಾಗುವುದು.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರ ಉಪಸ್ಥಿತಿಯಲ್ಲಿ ಶಾಸಕ ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ.ಪಟೇಲ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಡಾ.ಸಿ.ಎನ್.ಬಾಲಕೃಷ್ಣ, ಎ. ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು, ಮಹಾನಗರ ಪಾಲಿಕೆಯ ಮಹಾಪೌರ ಗಿರೀಶ್ ಚನ್ನವೀರಪ್ಪ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಣ್ಣ ಅವರು ಭಾಗವಹಿಸಲಿದ್ದಾರೆ. ಸಾಹಿತಿಗಳಾದ ಎಂ.ಜಿ ಪರಮೇಶ್ ಮಡಬಲು ಅವರು ಉಪನ್ಯಾಸ ನೀಡಲಿದ್ದಾರೆ.

## ನ.11 ರಂದು ಒನಕೆ ಓಬವ್ವ ಜಯಂತಿ

ಹಾಸನ : ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ನ.11 ರಂದು ಬೆ.11 ಗಂಟೆಗೆ ಒನಕೆ ಓಬವ್ವ ಜಯಂತಿಯನ್ನು ಆಯೋಜಿಸಲಾಗಿದೆ. ಅಂದು ಬೆ.10.30 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ವೀರವನಿತೆ ಒನಕೆ ಓಬವ್ವ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಕಲಬುರಗಿಯ ಬರಹಗಾರರಾದ ಡಾ. ವಿಠ್ಠಲ ವಗ್ಗನ್ ಅವರು ಉಪನ್ಯಾಸ ನೀಡಲಿದ್ದಾರೆ.

## ಗ್ರಾಮೀಣ ಭಾಗದ ರಸ್ತೆ ಸ್ಥಿತಿ ಕೇಳೋರಿಲ್ಲ | ಹದಗೆಟ್ಟ ರಸ್ತೆಯಲ್ಲಿ ನಿತ್ಯ ಅಪಘಾತ

# ಗುಂಡಿಬಿದ್ದ ರಸ್ತೆಯಲ್ಲಿ ಪ್ರಯಾಣಿಕರ ಪರದಾಟ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ರಸ್ತೆಗಳೆಲ್ಲಾ ಗುಂಡಿ ಬಿದ್ದು ವಾಹನಗಳ ಓಡಾಟಕ್ಕೆ ಭಾರೀ ತೊಂದರೆಯಾಗುತ್ತಿದ್ದು,ಪ್ರಯಾಣಿಕರು ಪ್ರಯಾಸ ಪಡುವಂತಾಗಿದೆ.

ಜಿಲ್ಲಾದ್ಯಂತ ರಸ್ತೆ ಅವಘಡಗಳಿಂದಲೇ ನಿತ್ಯ ಸಾವು ನೋವು ಸಂಭವಿಸುತ್ತಿವೆ. ರಾಜ್ಯ ಹೆದ್ದಾರಿ, ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾಗಿರುವ ರಸ್ತೆಗಳು ಸಂಪೂರ್ಣ ಗುಂಡಿ ಹಾಗು ಧೂಳುಮಯವಾಗಿವೆ. ಅರಕಲಗೂಡು-ಹೊಳೆನರಸೀಪುರ ಮಾರ್ಗದ ರಸ್ತೆ ಸಂಪೂರ್ಣ ಹದಗೆಟ್ಟು ಬೈಚನಹಳ್ಳಿ ಭಾಗದಲ್ಲಂತೂ ಡಾಂಬರು ಕಿತ್ತು ಸಂಚಾರಕ್ಕೆ ಯೋಗ್ಯವಲ್ಲದ ಪರಿಸ್ಥಿತಿ ಇದೆ. ಚನ್ನರಾಯಪಟ್ಟಣ-ಹೊಳೆನರಸೀಪುರ ಮಾರ್ಗವಾಗಿ ಪೂರ್ತಿ ಬೂವನಹಳ್ಳಿ ಕ್ರಾಸ್ ಗಡಿ ಭಾಗದಿಂದ ಕಳ್ಳಿಮುದ್ದನಹಳ್ಳಿ, ಹೆತ್ತಗೌಡನಹಳ್ಳಿ, ಬೈಚನಹಳ್ಳಿ, ಹೊಡಿಕೆಕಟ್ಟೆ, ಚಿಕ್ಕಗಾವನಹಳ್ಳಿ, ದೇವರಹಳ್ಳಿ, ಹೊನ್ನವಳ್ಳಿ ಬಳಿ ಅಲ್ಲಲ್ಲಿ ಡಾಂಬರು ಕಿತ್ತು



ವಾಹನಗಳ ಸಂಚಾರಕ್ಕೆ ಯೋಗ್ಯವಾಗಿಲ್ಲ. ಅರಕಲಗೂಡಿನ ಚನ್ನಬಸವೇಶ್ವರ ವೃತ್ತದಿಂದ ಆರಂಭವಾಗುವ ಗುಂಡಿ ಹೊಂಡಗಳು ಚನ್ನರಾಯಪಟ್ಟಣದ ಗನ್ನಿಕಡ ತನಕ ಹೆಜ್ಜೆಗೊಂದು ಬಾಯ್ತೆರೆದು ಸಾವಿನ ಹೆದ್ದಾರಿಯಾಗಿ ಮಾರ್ಪಟ್ಟಿವೆ.

ಅರಕಲಗೂಡಿನಿಂದ ಹೊಳೆನರಸೀಪುರ, ಚನ್ನರಾಯಪಟ್ಟಣವರೆಗೆ ರಸ್ತೆ ಗುಂಡಿಗಳಿಂದ ಕೂಡಿದೆ. ಪರಿಣಾಮವಾಗಿ ಈ ಮಾರ್ಗದಲ್ಲಿ ಬೆಂಗಳೂರು, ಮೈಸೂರು ಕಡೆಗೆ ಸಂಚರಿಸುವ ವಾಹನಗಳು ಬೇರೆ ಮಾರ್ಗ ಹಿಡಿದು ಸುತ್ತಿ ಬಳಸುವ ದುಸ್ಥಿತಿ ನಿರ್ಮಾಣವಾಗಿದೆ. ಹದಗೆಟ್ಟ ರಸ್ತೆಯಲ್ಲಿ ವಾಹನಗಳ ಅಪಘಾತ ನಿತ್ಯ ತಪ್ಪದಾಗಿದೆ. ಮೈಸೂರಿಗೆ ತೆರಳಲು ಹೊಳೆನರಸೀಪುರ ಮಾರ್ಗದ ಬದಲು ಅರಕಲಗೂಡಿನಿಂದ ಕೇರಳಾಪುರ ಇಲ್ಲವೇ ಪಿರಿಯಾಪಟ್ಟಣ ಮಾರ್ಗವಾಗಿ ವಾಹನಗಳು ಓಡಾಡುವಂತಾಗಿದೆ. ಹೊಳೆನರಸೀಪುರ ಮಾರ್ಗದ ರಸ್ತೆ ಹಾಳಾದ ಕಾರಣ ಇತ್ತೀಚೆಗೆ ಅರಕಲಗೂಡಿನಿಂದ ರಾಮನಾಥಪುರ ಮಾರ್ಗವಾಗಿ ಮೈಸೂರು ಕಡೆಗೆ ತೆರಳುತ್ತಿದ್ದ ಕಾರು ಪಲ್ಟಿಯಾಗಿ ಸ್ಥಳದಲ್ಲೇ ಚಾಲಕ ಮೃತಪಟ್ಟು ನಾಲ್ವರು ಗಾಯಗೊಂಡಿದ್ದರು.

> ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾಗಿದೆ. ರಸ್ತೆ ಗುಂಡಿ ಮುಚ್ಚಲು ಸಾಧ್ಯವಾಗುತ್ತಿಲ್ಲ. ಅಪಾಯಕಾರಿ ರಸ್ತೆಯಲ್ಲಿ ಜೀವ ಕೈಯಲ್ಲಿ ಹಿಡಿದು ಹೋಗಬೇಕಿದೆ. ಅಭಿವೃದ್ಧಿ ಕುರಿತು ಚರ್ಚಿಸುವ ಬದಲು ಮುಖ್ಯಮಂತ್ರಿ ಹುದ್ದೆ ಕಿತ್ತಾಟದಲ್ಲಿ ಮುಳುಗಿದ್ದಾರೆ.
> -ಹೆಚ್.ಡಿ.ರೇವಣ್ಣ, ಮಾಜಿ ಸಚಿವ

ಹೆಚ್.ಡಿ.ರೇವಣ್ಣ ಅವರು ಲೋಕೋಪಯೋಗಿ ಸಚಿವರಾಗಿದ್ದಾಗ ಹೊಳನರಸೀಪುರ- ಅರಕಲಗೂಡು ಮಾರ್ಗದ ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಿದ್ದರು. 2017 ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಹಾಗು ಹೆಚ್.ಸಿ. ಮಹದೇವಪ್ಪ ಅವರು ಲೋಕೋಪಯೋಗಿ ಸಚಿವರಾಗಿದ್ದಾಗ ಹಾಸನ-ಪಿರಿಯಾಪಟ್ಟಣ, ಮಾಗಡಿ- ಸೋಮವಾರ ಪೇಟೆ ಮಾರ್ಗದ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದ್ದರು. ಇದೀಗ ಇವೆರಡು ಪ್ರಮುಖ ಹೆದ್ದಾರಿಗಳು ಅಭಿವೃದ್ಧಿ ಭಾಗ್ಯ ಕಂಡಿವೆ. ಒಂದು ಕಾಲಕ್ಕೆ ಸುಸ್ಥಿತಿಯಲ್ಲಿದ್ದ ಹೊಳೆನರಸೀಪುರ, ಅರಕಲಗೂಡು ಮಾರ್ಗದ ದುಸ್ಥಿತಿ ಈಗ ಹೇಳತೀರದಾಗಿದೆ.

### ಪ್ರವಾಸಿಗರಿಗೆ ನರಕ ಪ್ರದರ್ಶನ

ಒಂದೆಡೆ ಈ ಭಾಗದ ಜನರಿಗೆ ರಸ್ತೆ ಸಂಚಾರ ದಿನನಿತ್ಯ ಯಮ ಯಾತನೆ ನೀಡುತ್ತಿದ್ದರೆ, ಮತ್ತೊಂದೆಡೆ ಬೆಂಗಳೂರು ಹಾಗು ಹೊರ ಜಿಲ್ಲೆಗಳಿಂದ ಬರುವ

» ನಾಲ್ಕನೇ ಪುಟದಲ್ಲಿ

# ಗಾಂಜಾ ಮಾರಾಟ: ಅಸ್ಸಾಂ ಮೂಲದ ವ್ಯಕ್ತಿ ಬಂಧನ

• ಪ್ರಜೋದಯ ವರದಿ

**ಅರೇಹಳ್ಳಿ :** ಹಾಡಹಗಲೇ ಗಾಂಜಾ ಮಾರಾಟ ಮಾಡುತ್ತಿದ್ದ ಅಸ್ಸಾಂ ಮೂಲದ ವ್ಯಕ್ತಿಯನ್ನು ಪೊಲೀಸರು ಬಂಧಿಸಿ, 1.50 ಕೆ.ಜಿ. ಗಾಂಜಾ ಸೊಪ್ಪನ್ನು ವಶಪಡಿಸಿಕೊಂಡಿದ್ದಾರೆ.

ಪಟ್ಟಣದ ಸಂತೋಷ ನಗರದಲ್ಲಿ ಸುಮಾರು ಮೂರು ವರ್ಷಗಳಿಂದ ಬಾಡಿಗೆ ಮನೆ ಪಡೆದು ಟಿಂಬರ್ ಕೆಲಸ ಮಾಡುತ್ತಿದ್ದ ತಾಹೀರ್ ಆಲಿ ಎಂಬಾತನನ್ನು ಬಂಧಿಸಲಾಗಿದೆ. ಅರೇಹಳ್ಳಿ ಮುಖ್ಯ ರಸ್ತೆಯ ಪೆಟ್ರೋಲ್ ಬಂಕ್ ಹತ್ತಿರ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಹಳೇಬೀಡು ವೃತ್ತದ ಸಿಪಿಐ ಜಗದೀಶ್, ಪಿಎಸ್‌ಐ ಯೋಗಾಬರಂ ಮತ್ತವರ ತಂಡ ಆರೋಪಿಯನ್ನು ಬಂಧಿಸಿ ಮಾದಕ ವಸ್ತು ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಇತ್ತೀಚೆಗೆ ಅರೇಹಳ್ಳಿ ಹಾಗು

» ನಾಲ್ಕನೇ ಪುಟದಲ್ಲಿ

# ಮಾನವ-ವನ್ಯಜೀವಿ ಸಂಘರ್ಷ ವೈಜ್ಞಾನಿಕ ಅಧ್ಯಯನ ಅಗತ್ಯ

ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಕರೆಗದ್ದೆಯಲ್ಲಿ ಕಳೆದ ವಾರ ಆನೆದಾಳಿ ನಡೆಸಿದ ಪರಿಣಾಮ ಇಬ್ಬರು ರೈತರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿ ದಿನವಿಡೀ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಎಚ್ಚೆತ್ತ ರಾಜ್ಯ ಸರಕಾರ ರವಿವಾರ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳ ಸಭೆ ನಡೆಸಿ ಮಾನವ-ವನ್ಯಜೀವಿ ಸಂಘರ್ಷವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸುದೀರ್ಘ ಚರ್ಚೆ ನಡೆಸಿದೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಡೆಯುವ ನಿಟ್ಟಿನಲ್ಲಿ ಎಂಟು ಅಂಶಗಳ ಕಾರ್ಯಯೋಜನೆಯನ್ನು ರೂಪಿಸಿ, ಜಾರಿಗೆ ತರಲು ನಿರ್ಧರಿಸಲಾಗಿದೆ. ಸರಕಾರ ರೂಪಿಸಿರುವ ಮಾರ್ಗಸೂಚಿಯನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುವ ಮೂಲಕ ಅರಣ್ಯ ಪ್ರದೇಶದ ತಪ್ಪಲಲ್ಲಿರುವ ಕೃಷಿ ಮತ್ತು ಜನವಸತಿ ಪ್ರದೇಶಗಳ ಜನರನ್ನು ಕಾಡುತ್ತಿರುವ ಪ್ರಾಣಭಯವನ್ನು ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು.

ದಿನಗಳುರುಳಿದಂತೆಯೇ ರಾಜ್ಯದ ವಿವಿಧೆಡೆಗಳಲ್ಲಿ ವನ್ಯಜೀವಿಗಳು ಜನವಸತಿ ಮತ್ತು ಕೃಷಿ ಭೂಮಿಗೆ ಲಗ್ಗೆ ಇಡುವ ಪ್ರಕರಣಗಳು ಹೆಚ್ಚುತ್ತಲೇ ಸಾಗಿದ್ದು ಭಾರೀ ಪ್ರಮಾಣದಲ್ಲಿ ಬೆಳೆ ಹಾನಿ ಮಾತ್ರವಲ್ಲದೆ ಅಮಾಯಕ ರೈತರು ವನ್ಯಜೀವಿಗಳ ದಾಳಿಗೆ ತುತ್ತಾಗಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಈ ಸಮಸ್ಯೆ ಜಟಿಲವಾಗುತ್ತಲೇ ಸಾಗಿದೆ. ವನ್ಯಜೀವಿಗಳ ಉಪಟಳ ಮೇರೆ ಮೀರಿದಾಗಲೆಲ್ಲ ಜನರು ಅರಣ್ಯ ಇಲಾಖೆ ಮತ್ತು ಸರಕಾರದ ವಿರುದ್ಧ ತೀವ್ರ ಆಕ್ರೋಶ ಹೊರಹಾಕುತ್ತಲೇ ಬಂದಿದ್ದು ಈ ಸಂದರ್ಭದಲ್ಲೆಲ್ಲ ಸರಕಾರ ಉನ್ನತ ಮಟ್ಟದ ಸಭೆ ನಡೆಸಿ ಪರಿಹಾರ ಮಾರ್ಗೋಪಾಯಗಳ ಬಗೆಗೆ ಚರ್ಚಿಸಿ, ಒಂದಿಷ್ಟು ಸಲಹೆ-ಸೂಚನೆ, ಕಾರ್ಯಯೋಜನೆ, ಹೊಸ ನೀತಿ ರೂಪಣೆಯ ಮಾತುಗಳನ್ನಾಡಿ ಸಂತ್ರಸ್ತರನ್ನು ಸಮಾಧಾನಪಡಿಸುವ ಪ್ರಯತ್ನ ಮಾಡುತ್ತಲೇ ಬಂದಿದೆ. ಆದರೆ ಸರಕಾರದ ನಿಧಾನಗತಿಯ ಧೋರಣೆಯಿಂದಾಗಿ ಈ ಎಲ್ಲ ಘೋಷಣೆಗಳು ಪರಿಪೂರ್ಣವಾಗಿ ಕಾರ್ಯರೂಪಕ್ಕೆ ಬರುವಲ್ಲಿ ವಿಫಲವಾಗಿವೆ. : ಇನ್ನು ಕೆಲವೆಡೆ ಒಂದಿಷ್ಟು ಜಾರಿಗೆ ಬಂದರೂ ಇವು ವನ್ಯಜೀವಿಗಳ ಉಪಟಳಕ್ಕೆ ಕಡಿವಾಣ ಹಾಕುವಲ್ಲಿ ಸಫಲವಾಗಿಲ್ಲ.

ರವಿವಾರ ನಡೆದ ಸಭೆಯಲ್ಲಿ ರೈತ ಸಂಘಟನೆಗಳ ಮುಖಂಡರು ಮತ್ತು ಬೆಳಗಾರರ ಸಂಘಟನೆಗಳ ಪದಾಧಿಕಾರಿಗಳು ಎತ್ತಿರುವ ಅಂಶಗಳ ಬಗೆಗೆ ಸಂಬಂಧಿತ ಇಲಾಖೆಗಳು ತುರ್ತು ಗಮನಹರಿಸಬೇಕು. ಅರಣ್ಯ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ರೆಸಾರ್ಟ್, ಸಫಾರಿ, ಗಣಿಗಾರಿಕೆಯಂತಹ ಮಾನವ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಕುರಿತಂತೆ ಸಚಿವರ ಸಹಿತ ಅಧಿಕಾರಿಗಳ ಗಮನ ಸೆಳೆದಿದ್ದಾರೆ. ಈ ಎಲ್ಲ ಅಕ್ರಮ ಚಟುವಟಿಕೆಗಳ ಬಗೆಗೆ ಜಾಣಮೌನ ತಳೆದಿರುವ ಕುರಿತಂತೆ ಸಚಿವರ ಸಮ್ಮುಖದಲ್ಲಿಯೇ ತುಸು ಖಾರವಾಗಿಯೇ ಅಧಿಕಾರಿಗಳನ್ನುತರಾಟೆಗೆ ತೆಗೆದುಕೊಂಡಿದ್ದಾರೆ. ಮೇಲ್ನೋಟಕ್ಕೆ ರೈತ ಮುಖಂಡರ ಈ ಮಾತುಗಳು ಆಕ್ರೋಶ ಭರದಿಂದ ಕೂಡಿವೆ ಎಂದೆನಿಸಿದರೂ ಈ ಬಗ್ಗೆ ಸರಕಾರ ಮತ್ತು ಸಂಬಂಧಿತ ಇಲಾಖೆ ಗಂಭೀರವಾಗಿ ಚಿಂತನೆ ನಡೆಸಬೇಕು. ಅರಣ್ಯ ಪ್ರದೇಶದಲ್ಲಿ ಬೃಹತ್ ಯಂತ್ರೋಪಕರಣಗಳನ್ನು ಬಳಸಿ ನಡೆಸಲಾಗುತ್ತಿರುವ ವಾಣಿಜ್ಯ ಚಟುವಟಿಕೆಗಳಿಂದಾಗಿ ವನ್ಯಜೀವಿಗಳು ನಾಡಿನ ಹಾದಿ ಹಿಡಿಯುತ್ತಿವೆ ಎಂಬುದನ್ನು ಗಂಭೀರವಾಗಿ ಪರಿಗಣಿಸದಿರುವುದು ಅಚ್ಚರಿಯೇ ಸರಿ. ದಟ್ಟ ಅರಣ್ಯ ಪ್ರದೇಶಗಳಲ್ಲಿ ಬೃಹದಾಕಾರವಾಗಿ ಬೆಳೆದಿರುವ ವಾಣಿಜ್ಯ ಚಟುವಟಿಕೆಗಳನ್ನು ನಿಯಂತ್ರಿಸದೇ ಹೋದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಸದ್ಯೋಭವಿಷ್ಯದಲ್ಲಿ ನಿತ್ಯನಿರಂತರವಾಗಲಿರುವುದು ನಿಶ್ಚಿತ.

ಇನ್ನಾದರೂ ಸಂಬಂಧಪಟ್ಟ ಎಲ್ಲ ಇಲಾಖೆಗಳು ಈ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಿ, ರಾಜ್ಯದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗಲು ಮೂಲ ಕಾರಣವೇನು ಎಂಬುದನ್ನು ಪತ್ತೆ ಹಚ್ಚಿ ಲಭ್ಯವಿರುವ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು.




## 06-11-2025 ದಿನ ಭವಿಷ್ಯ



**ಮೇಷ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಭೂಮಿ ಅಥವಾ ಯಾವುದೇ ಆಸ್ತಿಯಲ್ಲಿ ಹೂಡಿಕೆ ಮಾಡುವುದು ಇಂದು ನಿಮಗೆ ಮಾರಕವಾಗಬಹುದು, ಸಾಧ್ಯವಾದಷ್ಟು ಈ ವಿಷಯಗಳಲ್ಲಿ ಹೂಡಿಕೆ ಮಾಡುವುದನ್ನು ತಪ್ಪಿಸಿ. ಒಬ್ಬ ಹಳೆಯ ಸ್ನೇಹಿತ ದಿನದ ಅಂತ್ಯದಲ್ಲಿ ಒಂದು ಆಹ್ಲಾದಕರ ಭೇಟಿ ನೀಡುತ್ತಾರೆ.



**ವೃಷಭ:** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು ನಿಮ್ಮ ಪರಿಸ್ಥಿತಿ ಮತ್ತು ನಿಮ್ಮ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವ ನಿಕಟ ಸ್ನೇಹಿತರೊಂದಿಗೆ ಹೊರಗೆ ಹೋಗಿ.




**ಮಿಥುನ:** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ಪತ್ನಿಯ ವ್ಯವಹಾರಗಳಲ್ಲಿ ನಿಮ್ಮ ಹಸ್ತಕ್ಷೇಪ ಅವಳಿಗೆ ಕಿರಿಕಿರಿ ಮಾಡಬಹುದು. ಕೋಪ ಭುಗಿಲೇಳುವುದನ್ನು ತಪ್ಪಿಸಲು ಅವಳ ಅನುಮತಿ ತೆಗೆದುಕೊಳ್ಳಿ.



**ಕರ್ಕಾಟಕ:** ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ. ಮನೆಯಲ್ಲಿನ ಹಬ್ಬದ ವಾತಾವರಣ ನಿಮ್ಮ ಉದ್ವೇಗವನ್ನು ಶಮನಗೊಳಿಸುತ್ತದೆ. ನೀವು ಇದರಲ್ಲಿ ಭಾಗವಹಿಸುತ್ತೀರಿ ಮತ್ತು ಕೇವಲ ಮೂಕ ಪ್ರೇಕ್ಷಕರಾಗಿ ಮಾತ್ರ ಉಳಿಯುವುದಿಲ್ಲವೆಂದು ಖಚಿತಪಡಿಸಿಕೊಳ್ಳಿ.



**ಸಿಂಹ:** ಸಣ್ಣ ಸಣ್ಣ ವಿಷಯಗಳು ನಿಮ್ಮ ಮನಸ್ಸು ಕೆಡಿಸಲು ಬಿಡಬೇಡಿ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ- ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ. ನಿಮ್ಮ ಮಗುವಿನ ಒಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಆಮಂತ್ರಣ ಸಂತೋಷದ ಮೂಲವಾಗಬಹುದು. ಅವನು(ಳು) ನಿಮ್ಮ ನಿರೀಕ್ಷೆಗಳನ್ನು ಪೂರೈಸುವುದು ನಿಮ್ಮ ಕನಸನ್ನು ನನಸಾಗಿಸಬಹುದು.



**ಕನ್ಯಾ:** ನೀವು ಒಂದು ದೀರ್ಘ ಪ್ರಯಾಣಕ್ಕೆ ಹೋಗಲು ಯೋಜನೆ ಹಾಕುತ್ತಿದ್ದ ಹಾಗೆ ನಿಮ್ಮ ಆರೋಗ್ಯ ಮತ್ತು ಇಂಧನ ಸಂರಕ್ಷಣೆಯ ಹವ್ಯಾಸ ನಿಮಗೆ ಅಪಾರವಾದ ಉಪಯೋಗವು ಂಟುಮಾಡುತ್ತದೆ. ಬಿಡುವಿಲ್ಲದ ಕೆಲಸಗಳ ಹೊರತಾಗಿಯೂ ನೀವು ಆಯಾಸವನ್ನು ನಿಭಾಯಿಸಲು ಶಕ್ತರಾಗಿರುತ್ತೀರಿ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ.



**ತುಲಾ:** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಗಡಿಬಿಡಿಯ ನಿರ್ಧಾರಗಳನ್ನು ಕೈಗೊಳ್ಳಬೇಡಿ-ವಿಶೇಷವಾಗಿ ಪ್ರಮುಖ ಹಣಕಾಸಿನ ವ್ಯವಹಾರಗಳ ಬಗ್ಗೆ ಮಾತನಾಡುವಾಗ. ಸಣ್ಣ ಮಕ್ಕಳು ನಿಮ್ಮನ್ನು ವ್ಯಸ್ತವಾಗಿರಿಸುತ್ತಾರೆ ಮತ್ತು ಸಂತೋಷ ತರುತ್ತಾರೆ.



**ವೃಶ್ಚಿಕ:** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ - ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ ಮತ್ತು ನಿಮ್ಮ ಕೆಲಸಗಳನ್ನು ಇನ್ನೊಂದು ದಿನಕ್ಕೆ ವರ್ಗಾಯಿಸಿ. ಇಂದಿನವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು.



**ಧನು:** ತುಂಬಾ ಉತ್ಸಾಹ ಮತ್ತು ಸ್ಫೋಟಕ ಭಾವೋದ್ರೇಕಗಳು ನಿಮ್ಮ ನರಮಂಡಲಕ್ಕೆ ಹಾನಿ ಮಾಡಬಹುದು. ಇದನ್ನು ತಪ್ಪಿಸಲು ನಿಮ್ಮ ಭಾವನೆಗಳನ್ನು ನಿಯಂತ್ರಿಸಿ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ನಿಮ್ಮನ್ನು ಈ ಮೊದಲು ಆಮಂತ್ರಿಸಿರದಿದ್ದಲ್ಲಿ ಆಮಂತ್ರಿಸಿದಲ್ಲಿ -ಆಹ್ವಾನವನ್ನು ಸಭ್ಯತೆಯಿಂದ ಸ್ವೀಕರಿಸಿ.



**ಮಕರ:** ನೀವು ಇಂದು ನಿಮಗಾಗಿ ಸಾಕಷ್ಟು ಸಮಯ ಹೊಂದಿರುವುದರಿಂದ ನಿಮ್ಮ ಒಳ್ಳೆಯ ಆರೋಗ್ಯದ ಸಲುವಾಗಿ ಒಂದು ಧೀರ್ಘ ನಡಿಗೆಗೆ ಹೋಗಿ. ಈ ರಾಶಿಚಕ್ರಕ್ಕೆ ಸಂಬಂಧಿಸಿದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ವಿಷಯದ ಬಗ್ಗೆ ಹಣವನ್ನು ಖರ್ಚುಮಾಡಬಹುದು ಸಂಗಾತಿ ಧೂಮಪಾನ ಬಿಡುವಂತೆ ನಿಮ್ಮನ್ನು ಉತ್ತೇಜಿಸುತ್ತಾರೆ.



**ಕುಂಭ:** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ಮತ್ತು ಆತ್ಮವಿಶ್ವಾಸದಿಂದ ನಿಮ್ಮ ಸುತ್ತಲಿರುವ ಜನರನ್ನು ಪ್ರಭಾವಿಸಬಹುದಾದ ಸಾಧ್ಯತೆಗಳಿವೆ. ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರುತ್ತೀರೋ ಅಷ್ಟೇ ನಿಮಗೆ ಉತ್ತಮವಾಗಿರುತ್ತದೆ ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ.



**ಮೀನ:** ಧ್ಯಾನ ಮತ್ತು ಆತ್ಮ ಸಾಕ್ಷಾತ್ಕಾರ ಪ್ರಯೋಜನಕಾರಿಯಾಗಬಹುದು. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ಕುಟುಂಬದ ಸದಸ್ಯರೊಂದಿಗೆ ನಿಮ್ಮ ಸಮಸ್ಯೆಗಳನ್ನು ಹಂಚಿಕೊಂಡು ನೀವು ಒಳೆಯದನ್ನು ಅನುಭವಿಸಬಹುದು. ತನ್ನ ಪ್ರೀತಿಪಾತ್ರರಿಂದ ದೂರವಿರುವ ಜನರು, ಇಂದು ಅವರ ಪ್ರೀತಿಪಾತ್ರರನ್ನು ನೆನಪಿಸಿಕೊಳ್ಳಬಹುದು.

# ಸಂತೋಷದ ಹಾರ್ಮೋನುಗಳು

ಇಂದು ಸಂತೋಷದ ಹಾರ್ಮೋನುಗಳ ಬಗ್ಗೆ ತಿಳಿದುಕೊಳ್ಳೋಣ. ಈ ಜಗತ್ತಿನಲ್ಲಿ ಅನುಭಾವಿಗಳು, ದಾರ್ಶನಿಕರು, ಋಷಿಗಳು ಹೇಳಿದ್ದು ಏನೆಂದರೆ ನಾವು ಈ ಸುಂದರ ಜಗತ್ತಿಗೆ ಬಂದಿದ್ದು ಅನುಭವಿಸಲು ಅಂದರೆ ಅನುಭವ ಮಾಡಿಕೊಳ್ಳಲು. ಎಂತಹ ಅನುಭವ ಆಗಬೇಕೆಂದರೆ ಸಂತೋಷದ ಅನುಭವವಾಗಬೇಕು. ಸಂತೋಷದ ಅನುಭವ ಆಗಬೇಕಾದರೆ ಸಂತೋಷ ಕೊಡುವುದನ್ನು ನೋಡಬೇಕು, ಕೇಳಬೇಕು, ರುಚಿಸಬೇಕು, ಸ್ಪರ್ಶಿಸಬೇಕು ಹಾಗೆ ಸಂತೋಷ ಆಗುವಂತೆ ಕೆಲಸ ಮಾಡಬೇಕು. ವಸ್ತುಗಳನ್ನು, ಅವಯವಗಳನ್ನು ಮತ್ತು ಇಂದ್ರಿಯಗಳನ್ನು ಸಂತೋಷವಾಗುವಂತೆ ಬಳಸಬೇಕು. ಯಾವುದನ್ನೇ ಮಾಡಬೇಕಾದರೂ ಶೇಕಡ ನೂರರಷ್ಟು ಮನಸ್ಸು ಮಗ್ನವಾಗಬೇಕು. ತನ್ಮಯತೆ ಅಗತ್ಯ. ಪ್ರೀತಿ ಇರುವಲ್ಲಿ ಮನಸ್ಸು ಮಗ್ನವಾಗುತ್ತದೆ. ಮಗ್ನತೆಯಿಂದ ಅನುಭವವಾಗುತ್ತದೆ. ನಮ್ಮಲ್ಲಿರುವುದನ್ನು ಇತರರೊಂದಿಗೆ ಪ್ರೀತಿಯಿಂದ ಹಂಚಿಕೊಂಡು ಸಂತೋಷಪಡಬೇಕು. ಇನ್ನೊಬ್ಬರಲ್ಲಿ ಇರುವ ಒಳ್ಳೆಯದನ್ನು ಪ್ರಶಂಸೆ ಮಾಡುವುದು, ವೈರಿಗಳನ್ನು ಕ್ಷಮಿಸುವುದು ಅಂದರೆ ನಮ್ಮ ತಲೆಯಿಂದ ತೆಗೆದು ಹಾಕುವುದು ಬಹಳ ಮುಖ್ಯ.

ಪ್ರತಿಯೊಂದನ್ನೂ ಅನುಭವಿಸುವಾಗ ಕೃತಜ್ಞತೆ ಸಲ್ಲಿಸಬೇಕು. ಸಹಾಯ ಮಾಡಿದವರಿಗೆ ಕೃತಜ್ಞತೆ ಸಲ್ಲಿಸುವುದು. ನಮ್ಮ ಬದುಕಿಗೆ ಆಧಾರವಾದ ನಿಸರ್ಗ, ಆಹಾರ, ನೀರು, ಸೂರ್ಯ ಮತ್ತು ಗಾಳಿ ಇವುಗಳಿಂದ ನಾವು ಬದುಕಿರುವುದರಿಂದ ಕೃತಜ್ಞತೆ ಸಲ್ಲಿಸಬೇಕು. ಹೀಗೆ ಮಾಡಿದರೆ ಬದುಕು ಸಂತೋಷದಿಂದ ಕೂಡಿರುತ್ತದೆ ಎಂದು ಋಷಿ ಮುನಿಗಳು ಹೇಳಿದರು. ಇದರಿಂದ ನಮ್ಮ ದೇಹದಲ್ಲಿ ಏನೇನು ವೈಜ್ಞಾನಿಕವಾಗಿ ಬದಲಾಗುತ್ತದೆ ಅನ್ನುವುದನ್ನು ಋಷಿಮುನಿಗಳು ಹೇಳಲಿಲ್ಲ. ಹಾಗಾಗಿ ನಾವು ಇವುಗಳ ಬಗ್ಗೆ ತಾತ್ಸಾರ. ಇವುಗಳಿಂದ ವೈಜ್ಞಾನಿಕವಾಗಿ ಏನೇನಾಗುತ್ತದೆ ಎನ್ನುವುದನ್ನು ನೋಡೋಣ. ಒಂದು ಸಂದರ್ಶನದಲ್ಲಿ ಡಾ. ಮಾಲಿನಿ ಸುತ್ತೂರು ಹೇಳಿದ್ದನ್ನು ಹಂಚಿಕೊಳ್ಳಬೇಕೆಂದು ಈ ಲೇಖನ ಬರೆಯಲಾಗಿದೆ.

ನಮ್ಮ ದೇಹದಲ್ಲಿ ಸಂತೋಷದ ಹಾರ್ಮೋನುಗಳು ಐದು. ಅವುಗಳೆಂದರೆ ಸೆರೋಟೋನಿನ್, ಡೋಪೊಮೆನ್, ಆಕ್ಸಿಟೋಸಿನ್, ಮೆಲಟೋನಿನ್ ಮತ್ತು ಎಂಡಾರ್ಫಿನ್. ಈ 5 ಹಾರ್ಮೋನ್ಗಳೇ ಸಂತೋಷದ ಹಾರ್ಮೋನ್ ಗಳು. ಈ ಮೇಲೆ ಹೇಳಿದಂತೆ ಕೆಲಸ ಮಾಡಿದಾಗ ಈ ಹಾರ್ಮೋನ್ ಗಳು ಬಿಡುಗಡೆಯಾಗುತ್ತವೆ. ಯಾವ ಯಾವ ಸಂದರ್ಭದಲ್ಲಿ, ಯಾವ ಯಾವ ಹಾರ್ಮೋನ್‌ಗಳು ಬಿಡುಗಡೆಯಾಗುತ್ತದೆ ಅನ್ನುವುದನ್ನು ನೋಡೋಣ.

ಒಳ್ಳೆಯದನ್ನು ಕಂಡಾಗ, ಪ್ರಶಂಸೆ ಮಾಡಿದರೆ, ಡೋಪೋಮಿನ್ ಹಾರ್ಮೋನ್ ಬಿಡುಗಡೆಯಾಗುತ್ತದೆ. ಡೋಪೋಮಿನ್ ಹಾರ್ಮೋನ್ ಹೇಳಿದವರಿಗೂ ಹಾಗೂ ಪ್ರಸಂಶೆಗೆ ಒಳಗಾದವರಿಗೂ ಇಬ್ಬರಿಗೂ ಬಿಡುಗಡೆಯಾಗುತ್ತದೆ. ಇದರಿಂದ ಹೇಳಿದವರಿಗೂ ಮತ್ತು ಪ್ರಸಂಶೆಗೆ ಒಳಗಾದವರೆಗೂ ಸಂತೋಷವಾಗುತ್ತದೆ. ಸೆರೆಟೋನಿನ್ ಎನ್ನುವ ಹಾರ್ಮೋನ್ ಅನ್ನು ಮೂಡ್ ಹಾರ್ಮೋನ್ ಎನ್ನುವರು. ಈ ಮೇಲೆ ಹೇಳಿದ ಕೆಲಸ ಮಾಡಿದಾಗ ನಾವು ಇಡೀ ದಿನ ಈ ಸಂತೋಷದಿಂದ ಇರುತ್ತೇವೆ. ಈ ಸೆರಟೋನಿನ್ ಶೇಕಡ 80ರಷ್ಟು ಕರುಳಿನ ಬ್ಯಾಕ್ಟೀರಿಯಾದಿಂದ ಬಿಡುಗಡೆಯಾಗುತ್ತದೆ. ಶೇಕಡ 20ರಷ್ಟು ನಮ್ಮ ಮೆದುಳಿನಿಂದ ಬಿಡುಗಡೆಯಾಗುತ್ತದೆ. ನಮ್ಮ ಕರುಳಿನಲ್ಲಿರುವ ಒಳ್ಳೆಯ ಬ್ಯಾಕ್ಟೀರಿಯಗಳು ಈ ಸೆರಟೋನಿನ್ ಹಾರ್ಮೋನನ್ನು ತಯಾರಿಸುತ್ತವೆ. ಈ ಒಳ್ಳೆಯ ಬ್ಯಾಕ್ಟೀರಿಯಗಳು ಬದುಕಲು ನಾರು ಪದಾರ್ಥ ಬಹಳ ಮುಖ್ಯ. ಸಸ್ಯಹಾರದಿಂದ ನಾರು ಪದಾರ್ಥ ಹೆಚ್ಚು ಪ್ರಮಾಣದಲ್ಲಿ ಸಿಗುತ್ತದೆ. ಆ ರೀತಿ ಮೂಡ್ ಆಗಲು ಸೆರಟೋನಿನ್ ಹಾರ್ಮೋನ್ ಕಾರಣ. ನಮ್ಮ ಪ್ರೀತಿ ಪಾತ್ರರು ಕಂಡಾಗ ನಮಗೆ ಆಕ್ಸಿಟೋಸಿನ್ ಹಾರ್ಮೋನ್ ಬಿಡುಗಡೆಯಾಗುತ್ತದೆ. ಆಕ್ಸಿಟೋಸಿನ್ ಹಾರ್ಮೋನ್ ಗೆ ಪ್ರೀತಿಯ ಹಾರ್ಮೋನ್ ಎನ್ನುವರು. ಈ ಹಾರ್ಮೋನ್ ಬಿಡುಗಡೆಯಾಗುವುದರಿಂದ ಸಂತೋಷ ಉಂಟಾಗುತ್ತದೆ. ನಾವು ಕಣ್ತುಂಬ ನಿದ್ರಿಸಲು ಮೆಲೆಟೋನಿನ್ ಹಾರ್ಮೋನ್ ಬೇಕು. ಇದು ಫೈನಿಲ್ ಗ್ರಂಥಿಯಿಂದ ಬಿಡುಗಡೆಯಾಗುತ್ತದೆ. ಬೆಳಕಿದ್ದು, ಮನಸ್ಸು ಒತ್ತಡದಿಂದ ಬಳಲುತ್ತಿದ್ದರೆ, ನಾವು ಚೆನ್ನದ ಮಂಚದ ಮೇಲೆ ಮಲಗಿದರು ನಿದ್ರೆ ಬರುವುದಿಲ್ಲ. ಮೆಲೆಟೋನಿನ್ ಬಿಡುಗಡೆಯಾಗಲು ಕತ್ತಲ ಪರಿಸರ ಬಹಳ ಮುಖ್ಯ ಹಾಗೂ ಮನಸ್ಸಿನ ಒತ್ತಡ ಇಲ್ಲದಿರುವುದು ಅಗತ್ಯ. ಒತ್ತಡ ಇದ್ದರೆ, ಬೆಳಕು ಇದ್ದರೆ ಈ ಹಾರ್ಮೋನ್ ಬಿಡುಗಡೆಯಾಗುವುದಿಲ್ಲ.



ನಾವು ಆಟ ಆಡಿದಾಗ ಏನೋ ಒಂದು ತರ ಸಂತೋಷ. ಏಕೆಂದರೆ ದೇಹ ದಣಿದಿದ್ದಾಗ ನೋವು ಉಂಟಾಗುತ್ತದೆ. ಆ ನೋವು ನಿವಾರಿಸಲು ನಮ್ಮ ಮೆದುಳು ಎಂಡಾರ್ಫಿನ್ ಎನ್ನುವ ಹಾರ್ಮೋನನ್ನು ಬಿಡುಗಡೆ ಮಾಡುತ್ತದೆ. ಇದು ನೈಸರ್ಗಿಕ ನೋವು ನಿವಾರಕ. ಇವುಗಳ ಕೆಲಸ ನೋಡಿದಾಗ ನಮ್ಮ ಹಿರಿಯರು ಹೇಳಿದ್ದು ನಮ್ಮ ದೇಹ ಸಂಪತ್ತಿನ ಸಂಪತ್ತು. ಎಂತಹ ಅದ್ಭುತ ರಚನೆ ಇದೆ ಅನ್ನುವುದು ಗೊತ್ತಾಗುತ್ತದೆ. ಆದುದರಿಂದ ನಾವು ಮಧುರ ಭಾವ ಬೆಳೆಸಿಕೊಳ್ಳಬೇಕು. ಮಧುರ ಭಾವ ಎಂದರೆ ಪ್ರೇಮ, ಮಮತೆ, ಕರುಣೆ, ಮನದಲ್ಲಿ ತುಂಬಿರುವುದು.

ಒಂದು ವೇಳೆ ನಮ್ಮ ಭಾವ ಮಧುರವಿಲ್ಲದೆ ದ್ವೇಷ, ಮತ್ಸರ, ಕೋಪ ಮತ್ತು ತಾಪ ಬೆಳೆಸಿಕೊಂಡರೆ ನಮ್ಮ ದೇಹದಲ್ಲಿ ಒತ್ತಡದ ಹಾರ್ಮೋನ್ ಬಿಡುಗಡೆಯಾಗುತ್ತದೆ. ಒತ್ತಡದ ಹಾರ್ಮೋನ್‌ಗಳು ಯಾವುವೆಂದರೆ ಅಡ್ರಿನಲೀನ್ ಮತ್ತು ಕಾರ್ಟಿಸೋಲ್ ಹಾರ್ಮೋನ್‌ಗಳು. ಅಡ್ರಿನಲೀನ್ ನಮ್ಮ ವೈರಿ. ನಾವು ಕ್ಷಮಿಸದೆ ಇದ್ದಾಗ ಎದುರಿಗೆ ಕಂಡ ತಕ್ಷಣ ನಮ್ಮಲ್ಲಿ ಕೋಪ, ದ್ವೇಷ ಉಂಟಾಗುತ್ತದೆ. ಆಗ ದೇಹದಲ್ಲಿ ಮುಖದಲ್ಲಿ ಕೆಂಪು ಬಣ್ಣ ಗೋಚರಿಸುತ್ತದೆ. ಉಸಿರಾಟ ಹೆಚ್ಚಾಗುವುದನ್ನು ನೋಡುತ್ತೇವೆ. ಆಗ ಅಡ್ರಿನಲಿನ್ ಹಾರ್ಮೋನ್ ಬಿಡುಗಡೆಯಾಗುತ್ತದೆ. ಇದು ದೇಹ ಅಪಾಯದಲ್ಲಿದೆ ಎಂದು ಭಾವಿಸಿ, ಈ ಹಾರ್ಮೋನ್, ಪಿತ್ತ ಜನಕಾಂಗ ಸ್ಪರ್ಶಿಸಿದ ತಕ್ಷಣ, ತಾನು ಶೇಖರಿಸಿ ಇಟ್ಟುಕೊಂಡಿರುವ ಗ್ಲೈಕೋಜಿನ್ (ಕೊಬ್ಬು) ಅನ್ನು ಗ್ಲುಕೋಸ್ ಆಗಿ ಪರಿವರ್ತಿಸಿ ರಕ್ತಕ್ಕೆ ಬಿಡುಗಡೆ ಮಾಡುತ್ತದೆ. ಇದು ಮಧುಮೇಹ ಕಾಯಿಲೆಗೆ ಕಾರಣ. ಗ್ಲುಕೋಸ್ ರಕ್ತದಲ್ಲಿ ಇದ್ದರೆ ಮಾರಕ. ಹಾಗಾಗಿ ಅದು ಶಕ್ತಿ ಬಿಡುಗಡೆಯಾಗಲು ಜೀವಕೋಶ ಮೈಟೋಕಾಂಡ್ರಿಯಗಳಿಗೆ ತಲುಪಿಸಬೇಕು. ಅದಕ್ಕಾಗಿ ಹೃದಯ ಹೆಚ್ಚು ಪಂಪ್ ಮಾಡುತ್ತದೆ. ಇದರಿಂದ ಬಿಪಿ (ರಕ್ತದೊತ್ತಡ) ಹೆಚ್ಚಾಗುತ್ತದೆ. ಒತ್ತಡ ಹೆಚ್ಚಾದಾಗ ಅನೇಕ ಜೀವಕೋಶಗಳು ಹಾನಿಯಾಗುತ್ತದೆ. ಹೊಸ ಜೀವಕೋಶಗಳ ರಚನೆಗೆ ಕಾರ್ಟಿಸೋಲ್ ಹಾರ್ಮೋನ್ ಅಗತ್ಯ. ಇದು ಸ್ಟೆರಾಯ್ ಹಾರ್ಮೋನ್. ಹಾಗಾಗಿ ನಾವು ದ್ವೇಷ, ಕೋಪ, ಮತ್ಸರ ಇವುಗಳನ್ನು ಬೆಳೆಸಿಕೊಂಡರೆ ದೇಹದಲ್ಲಿ ಅನೇಕ ಹಾನಿಯಾಗುತ್ತದೆ. ಅದಕ್ಕೆ ಹಿರಿಯರು ಹೇಳಿದ್ದು ಚಿತೆ ಹೊರಗೆ ಸುಟ್ಟರೆ, ಚಿಂತೆ ನಮ್ಮನೆ ಸುಡುತ್ತದೆ. ಅದಕ್ಕೆ ಬಸವಣ್ಣ ಹೇಳಿದ್ದು ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ಮನ ಸಂತೈಸಿಕೊಳ್ಳಿ. ಎಂದರೆ ಇದರ ಅರ್ಥ ನಮ್ಮ ಮನಸ್ಸನ್ನು ಸಮಾಧಾನ ಮಾಡಿಕೊಳ್ಳುವುದು ಬಹಳ ಮುಖ್ಯ. ಆದ್ದರಿಂದ ಮಕ್ಕಳೇ ನಮ್ಮ ಅನುಭಾವಿಗಳು ಹೇಳಿದ್ದು ಸಂತೋಷವೇ ಸಂಪತ್ತು. ಹಾಗಾಗಿ ನಮ್ಮ ಎಲ್ಲಾ ಕೆಲಸದಲ್ಲಿ ಸಂತೋಷಕ್ಕೆ ಆದ್ಯತೆ ನೀಡಬೇಕು. ವಿಚಾರ ಮಾಡಿದರು, ಸಂತೋಷ ಆಗುವಂತೆ ವಿಚಾರ ಮಾಡಬೇಕು. ಮಾತನಾಡಿದರೆ ಸಂತೋಷ ಆಗುವಂತೆ ಮಾತನಾಡಬೇಕು. ಇದರಿಂದ ಆಟೋ ಇಮ್ಯೂನ್ ಕಾಯಿಲೆ ಸೇರಿದಂತೆ ಯಾವುದೂ ಇಲ್ಲದೆ, ದೇಹದಲ್ಲಿ ಸಂತೋಷದ ಹಾರ್ಮೋನ್ ಬಿಡುಗಡೆಯಾಗಿ ಜೀವನ ರಸಮಯವಾಗುತ್ತದೆ. ಸೌಂದರ್ಯದಿಂದ ತುಂಬುತ್ತದೆ, ಮಧುರವಾಗುತ್ತದೆ. ಸಂತೋಷದ ಅನುಭವದಿಂದ ಬದುಕು ಶ್ರೀಮಂತವಾಗುತ್ತದೆ. ಈ ಹಾರ್ಮೋನ್‌ಗಳನ್ನು ಕೋಟಿ ಕೊಟ್ಟು ಖರೀದಿಸಲು ಸಾಧ್ಯವಿಲ್ಲ. ಇದು ಕೇವಲ ಮಧುರ ಭಾವದಿಂದ ತನ್ನಿಂದ ತಾನೇ ದೇಹದಲ್ಲಿ ಬಿಡುಗಡೆ ಮಾಡುತ್ತದೆ.

ಮೆದುಳಿಗೆ ಯಾವ ರೀತಿ ಪ್ರಚೋದನೆ ದೊರಕುತ್ತದೆ ಹಾಗೆ. ಪ್ರೇಮದ ಪ್ರಚೋದನೆ ಇದ್ದರೆ ಸಂತೋಷದ ಹಾರ್ಮೋನ್, ದುಃಖದ ಪ್ರಚೋದನೆ ಇದ್ದರೆ ಒತ್ತಡದ ಹಾರ್ಮೋನ್ ಬಿಡುಗಡೆ ಮಾಡುತ್ತದೆ. ಆದ್ದರಿಂದ ಯೋಚಿಸಿ, ಪ್ರೀತಿಯ ಜೀವನ ಒಳ್ಳೆಯದು ಅಲ್ಲವೇ?

**- ಎಂ.ಪಿ. ಜ್ಞಾನೇಶ್,** ಮಂಗಳೂರು



# ಕರ್ನಾಟಕ ರಾಜ್ಯೋತ್ಸವ : ಒಂದು ಹಿನ್ನೋಟ



ಕನ್ನಡ ಎನುವ ಪದವೇ ಸೊಗಸು. ಹೊನ್ನಿಗಿಂತಲೂ ಮಿಗಿಲು. ಕನ್ನಡ ತಾಯಿಯ ಮಕ್ಕಳಾದ ನಾವು ಕರ್ನಾಟಕ ಎಂದು ನಾಮಾಂಕಿತವಾದ ದಿನವನ್ನು ಸಂಭ್ರಮದಿಂದ ಆಚರಿಸುತ್ತೇವೆ. ನಾಡು ನುಡಿಗಾಗಿ ಹೋರಾಡಿದ ಹಿರಿಯರನ್ನು ನೆನಪಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ.

ಏಕೀಕರಣದ ಚಳುವಳಿ 1905ರಿಂದ 1950ರೊಳಗೆ ಬಹಳಷ್ಟು ಬಾರಿ ನಡೆಯಿತು. ಎಲ್ಲವೂ ಪ್ರಾಂತ್ಯವಾರು ಭಾಷೆಯ ಆಧಾರದ ಮೇಲೆ ಮೈಸೂರು ರಾಜ್ಯ ಉದಯವಾಯಿತು. 1956 ನವಂಬರ 1 ರಂದು ಮದ್ರಾಸ್, ಹೈದರಾಬಾದ್, ಮುಂಬಯಿ ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳ ವಿಲೀನವಾಗಿ ಕರ್ನಾಟಕ ಎಂದು ನಾಮಕರಣವಾಯಿತು. ಈ ಮನ್ನಣೆಯು ದೇವರಾಜ್ ಅರಸುರವರ ಆಡಳಿತ ಕಾಲದಲ್ಲಾಯಿತು. ಆಲೂರರ ಜೊತೆಯಲ್ಲಿ ಕೈಜೋಡಿಸಿದವರು ಅನಕೃರವರು, ಡಾ ಕೋಟ ಶಿವರಾಮ ಕಾರಂತರು, ಮಾಸ್ತಿಯವರು, ಕುವೆಂಪುರವರು, ಕೃಷ್ಣರಾವ್, ಬಿ.ಎಂ.ಶ್ರೀಯವರು ಮೊದಲಾದವರು.

ಕರ್ನಾಟಕ ಎನ್ನುವ ಹೆಸರು ಹಿಂದಿನಿಂದಲೂ ಇತ್ತೆಂದು ಉಲ್ಲೇಖವಿದೆ. ಹೊಯ್ಸಳರು, ಕದಂಬರು, ಮೈಸೂರು ಅರಸರು ಕರ್ನಾಟಕ ಸಿಂಹಾಸನಾಧೀಶ್ವರ ಎಂದು ಬಿರುದಾಂಕಿತರೆಂದು ಉಲ್ಲೇಖವಿದೆ. ಕರ್ನಾಟಕ ಸಾಹಿತ್ಯದಲ್ಲೂ ಆಸಕ್ತಿಯಿತ್ತು. ಹಾಗಾಗಿ ಕರ್ನಾಟಕ ಹೆಸರೇ ಬಂತು. ಮುಂದೆ 1973 ನವಂಬರ 1ರಂದು ಮೈಸೂರು ಸಂಸ್ಥಾನ, ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ, ಉತ್ತರ ಕನ್ನಡ, ಉತ್ತರ ಕನ್ನಡ, ಮಲೆನಾಡು, ಹಳೆಯ ಮೈಸೂರು ಸೇರಿ ಕರ್ನಾಟಕವಾಯಿತು. ಕನ್ನಡಿಗರ ಸ್ಫೂರ್ತಿಯ ಸಂಕೇತವಾಗಿ ಹಳದಿ ಕೆಂಪು ಬಣ್ಣದ ಕನ್ನಡ ಧ್ವಜ, ನಾಡಗೀತೆ(ಜಯ ಭಾರತ ಜನನಿಯ ತನುಜಾತೆ) ಘೋಷಿಸಲ್ಪಟ್ಟಿತು. ಕರ್ನಾಟಕ ರಾಜ್ಯೋತ್ಸವದಂಗವಾಗಿ ತಾಯಿ ಭುವನೇಶ್ವರಿಯ ಭಾವಚಿತ್ರವಿಟ್ಟು ಮೆರವಣಿಗೆ ಹಮ್ಮಿಕೊಳ್ಳಲಾಗುತ್ತದೆ. ಶಾಲೆ, ಸಂಘಸಂಸ್ಥೆಗಳು, ಕಛೇರಿಗಳಲ್ಲಿ ಕನ್ನಡ ಧ್ವಜಕ್ಕೆ ಗೌರವ ನೀಡಲಾಗುತ್ತದೆ. ಸಾಂಸ್ಕೃತಿಕ ಸಮಾರಂಭಗಳನ್ನು ಏರ್ಪಡಿಸಲಾಗುತ್ತದೆ.

ಕರ್ನಾಟಕ ಏಕೀಕರಣದ ಬಗ್ಗೆ ಮಾಹಿತಿ ನೀಡುವುದಿದೆ. ಕನ್ನಡಮ್ಮನ ಮಡಿಲಿನ ಕುಡಿಗಳಾದ ನಮ್ಮ ಕರ್ತವ್ಯ ಬಹಳ ದೊಡ್ಡದಿದೆ. ವ್ಯವಹಾರಕ್ಕೆ ಯಾವುದೇ ಭಾಷೆ ಕಲಿಯೋಣ. ತಾಯಿ ಭಾಷೆಯ ಮರೆಯದಿರೋಣ. ಕನ್ನಡ ನಾಡು ನುಡಿಗಾಗಿ ನಾವೇನು ಮಾಡಬಹುದೆಂದು ಚಿಂತನ-ಮಂಥನ ನಡೆಸಬೇಕು. ಮನೆ ಮನೆಗಳಲ್ಲಿಯೂ ಮನೆ ಮಾತು ಕನ್ನಡವಿದ್ದಲ್ಲಿ ಪ್ರೋತ್ಸಾಹಿಸೋಣ.

ಕನ್ನಡ ಕಲಿಯೋಣ-ಕರ್ನಾಟಕ ನಾಡ ಹಬ್ಬವನ್ನು ಆಚರಿಸೋಣ. ಕನ್ನಡ ಭಾಷೆ, ಅದರ ಮಹತ್ವ, ಅರಿವು ಮೂಡಿಸುವ ಕೆಲಸವಾಗಬೇಕು. ಕಥೆ, ಕವನ, ಒಗಟು, ನುಡಿಗಟ್ಟು, ಪದಬಂಧ, ನಗೆಹನಿ, ವೈಚಾರಿಕ ಲೇಖನಗಳ ಪರಿಚಯ ಮಾಡಿಸಬಹುದು. ಅನ್ಯ ಭಾಷೆಗೆ ಗೌರವ ಕೊಡಬೇಕು ಹಾಗೆಂದು ಮಾತೃಭಾಷೆಯನ್ನು ತುಳಿಯಬಾರದು. ಕನ್ನಡ ಮಾಧ್ಯಮ ಶಾಲೆಗಳ ಉಳಿವಿಗಾಗಿ ಕ್ರಮ ಕೈಗೊಳ್ಳಬೇಕು. ಕಾಲಾಯ ತಸ್ಮೈ ನಮಃ ಎಂಬ ಹಾಗೆ, ಈಗಿನ ಪರಿಸ್ಥಿಗೆ ಸರಿಯಾಗಿ ವ್ಯವಹಾರಿಕಾ ಭಾಷೆಯನ್ನು ಕಲಿಯಬೇಕಾಗುತ್ತದೆ. ಆಂಗ್ಲ ಭಾಷೆಯಲ್ಲಿ ಕಲಿತರೆ ಮಾತ್ರ ನಾವು ಮನುಷ್ಯರಾಗಿರಬಹುದೆಂಬ ವ್ಯಾಮೋಹ, ಭ್ರಮೆಯಿಂದ ಹೊರಬರಬೇಕು. ಕನ್ನಡ ನೆಲ-ಜಲ, ಪ್ರಕೃತಿ ಪ್ರೀತಿ, ಗೌರವ ಬೆಳೆಸಿಕೊಳ್ಳಬೇಕು. ಸಂಘ ಸಂಸ್ಥೆಗಳ ಸಹಕಾರ ಪಡೆದುಕೊಳ್ಳಬಹುದು. ಕನ್ನಡಕ್ಕಾಗಿ ದುಡಿದ, ದುಡಿಯುವ ಮಹನೀಯರನ್ನು ಗೌರವಿಸುವ ಕೆಲಸವಾಗಬೇಕು.

ಯೋಗ್ಯರನ್ನು ಸ್ಥಳೀಯರು ಗುರುತಿಸಿ ಹೇಳಬೇಕು. ಅರ್ಹತೆಗೆ ಅಭಿನಂದನೆ ಸಿಗುವಂತಾಗಬೇಕು. ಸಾಹಿತಿಗಳ ಗುರುತಿಸುವಿಕೆ, ಎಲೆಯ ಮರೆಯ ಕಾಯಿಯಂತಿರುವವರನ್ನು, ಸದ್ದಿಲ್ಲದೆ ಸಮಾಜ ಸೇವೆ ಮಾಡುವವರನ್ನು, ಮಕ್ಕಳ ಸಾಹಿತಿಗಳನ್ನು ಆರಿಸಿ ಅಭಿನಂದಿಸುವ ಕೆಲಸವಾಗಬೇಕು. ರಾಜ್ಯೋತ್ಸವ ಆಚರಣೆಯ ಮಹತ್ವವನ್ನು ಶಾಲಾ ಕಲಿಕೆಯಲ್ಲಿಯೇ ಮಕ್ಕಳಿಗೆ ಮನದಟ್ಟು ಮಾಡಬೇಕು. ಭಿನ್ನತೆಯಲ್ಲಿ ಏಕತೆ ಇರುವುದನ್ನು ಒಪ್ಪಿ ನಡೆಯಬೇಕು. ಒಟ್ಟಾರೆಯಾಗಿ ಕನ್ನಡವನ್ನು ಅಸಡ್ಡೆ(ತಾತ್ಸಾರ) ಮಾಡದೆ ಕನ್ನಡದ ಕೈಂಕರ್ಯವನ್ನು ಪ್ರತಿಯೋರ್ವ ಕನ್ನಡಿಗನೂ ಮಾಡಿ ತನ್ನ ಅಳಿಲಸೇವೆಯನ್ನು ನಾಡಿಗಾಗಿ ಸಮರ್ಪಿಸಿದರೆ ರಾಜ್ಯೋತ್ಸವ ಆಚರಣೆ ಅರ್ಥಪೂರ್ಣವಾಗಬಹುದು.

**- ರತ್ನಾ ಕೆ ಭಟ್** ತಲಂಜೇರಿ

# ಒಂದು ಅಪಘಾತ

ನಿನ್ನೆ ಒಂದು ಅಪಘಾತವಾದ ಸುದ್ದಿ ತಿಳಿಯಿತು. ಅದರಲ್ಲಿ 40 ವರ್ಷದ ಗಂಡ ಮತ್ತು ಆತನ 35 ವರ್ಷದ ಹೆಂಡತಿ ಸ್ಥಳದಲ್ಲೇ ಸಾವನ್ನಪ್ಪಿದ್ದರು. ಅವರಿಗೆ ಐದು, ಏಳು ಮತ್ತು ಹತ್ತು ವರ್ಷದ ಮೂವರು ಮಕ್ಕಳಿದ್ದಾರೆ. ಬೇರೆ ಊರಿನಿಂದ ಬೆಂಗಳೂರಿಗೆ ಬಂದು ಬಟ್ಟೆ ಅಂಗಡಿ ಇಟ್ಟುಕೊಂಡು ಬಾಡಿಗೆ ಮನೆಯಲ್ಲಿ ಜೀವನ ಸಾಗಿಸುತ್ತಿದ್ದ ಕುಟುಂಬವದು. ಒಂದು ಕ್ಷಣ ಕಣ್ಣು ಮುಚ್ಚಿ ಯೋಚಿಸಿ ನೋಡಿ, 5, 7 ಮತ್ತು 10 ವರ್ಷದ ಗಂಡು-ಹೆಣ್ಣು ಮಕ್ಕಳು ಮನೆಯಲ್ಲಿ ಶಾಲಾ ಪುಸ್ತಕ ಓದುತ್ತಲೋ, ಟಿವಿ ನೋಡುತ್ತಲೋ, ಆಟವಾಡುತ್ತಲೋ ತಮ್ಮ ಅಪ್ಪ ಅಮ್ಮ ರಾತ್ರಿ ಮನೆಗೆ ಬರುತ್ತಾರೆ ಎಂದು ನಿರೀಕ್ಷಿಸುತ್ತಾ ಅವರದೇ ಲೋಕದಲ್ಲಿ ಮುಳುಗಿರುತ್ತಾರೆ. ಕೆಲವರು ಮೊಬೈಲಿನಲ್ಲಿ ಆಟವಾಡುತ್ತಿರುತ್ತಾರೆ, ಕೆಲವರು ಟ್ಯೂಷನ್‌ಗೂ ಹೋಗಿರಬಹುದು. ಒಟ್ಟಿನಲ್ಲಿ ಅಪ್ಪ-ಅಮ್ಮನನ್ನು ಮೊಬೈಲಿನಲ್ಲಿ ಸಂಪರ್ಕಿಸುತ್ತಾ ಅವರ ನಿರೀಕ್ಷೆಯಲ್ಲಿ ಇರುತ್ತಾರೆ.

ಆಗ ಇದ್ದಕ್ಕಿದ್ದಂತೆ ಅವರಿಗೆ ಪೊಲೀಸರು ಮೂಲಕವೋ ಅಥವಾ ಅವರ ನೆಂಟರಿಷ್ಟರ ಮೂಲಕವೇ ಅಥವಾ ಯಾರಾದರೂ ನೇರವಾಗಿಯೋ ಅಥವಾ ಮೊಬೈಲ್ ಮುಖಾಂತರವೋ ಅವರ ಅಪ್ಪ ಅಮ್ಮ ಇಬ್ಬರೂ ಮೃತಪಟ್ಟಿದ್ದಾರೆ ಎನ್ನುವ ಸುದ್ದಿ ತಿಳಿಯುತ್ತದೆ. ಊಹಿಸಿಕೊಳ್ಳಲು ಅಸಾಧ್ಯವಾದ ಪರಿಸ್ಥಿತಿ ಅದು. ಐದು, ಏಳು, ಹತ್ತು ವರ್ಷದ ಮಕ್ಕಳ ಮನಸ್ಸಿನಲ್ಲಿ ಯಾವ ರೀತಿಯ ಭಾವನೆಗಳು ಉಂಟಾಗುತ್ತದೆ ಎನ್ನುವುದು ಅಕ್ಷರಗಳಿಗೆ ನಿಲುಕುವುದಿಲ್ಲ. ಜೊತೆಗೆ ಅವರಿಗೆ ಆ ಕ್ಷಣದಲ್ಲಿ ದುಃಖ, ಆತಂಕ ಹೊರತುಪಡಿಸಿ ಮುಂದಿನ ಭವಿಷ್ಯದ ಯೋಚನೆಗಳು ಹೊಳೆಯುವುದಿಲ್ಲ. ಅವರ ಸುತ್ತಮುತ್ತಲಿನವರ ಪ್ರತಿಕ್ರಿಯೆಗಳನ್ನು ಗಮನಿಸಿ ಏನೇನೋ ಭಾವನೆಗಳು ಸಂಘರ್ಷದಲ್ಲಿ ತೊಡಗಿರುತ್ತವೆ.

ನಾಳೆಯಿಂದ ನನಗೆ ಊಟ ಕೊಡಲು ಅಮ್ಮ ಇಲ್ಲ, ನಾಳೆಯಿಂದ ನನ್ನನ್ನು ಎಚ್ಚರಿಸಲು, ಮುದ್ದು ಮಾಡಲು ಅಪ್ಪ ಇಲ್ಲ, ನಾಳೆಯಿಂದ ನನಗೇನಾದರೂ ಖುಷಿಯಾದರೆ ಅಥವಾ ಸಂಕಟವಾದರೆ ಹೇಳಿಕೊಳ್ಳಲು ಅಪ್ಪ ಅಮ್ಮ ಇಬ್ಬರೂ ಇಲ್ಲ ಎನ್ನುವ ಭಾವನೆ ಆ ಕ್ಷಣದಲ್ಲಿ ಅವರಿಗೆ ಹೊಳೆದಿರುವುದಿಲ್ಲ. ಏಕೆಂದರೆ ಘಟನೆಗಳು ತೀವ್ರವಾಗಿ ಮತ್ತು ವೇಗವಾಗಿ ನಡೆಯುತ್ತಿರುತ್ತದೆ.

ಇದು ಒಂದು ಹಂತದ ನೋವಿನ ಕ್ಷಣಗಳಾದರೆ ಅಪ್ಪ ಅಮ್ಮನ ಮೃತ ದೇಹಗಳನ್ನು ನೋಡಿದಾಗ ಆ ನಿಸ್ತೇಜಿತವಾದ ದೇಹ ಪ್ರತಿಕ್ರಿಯೆ ಕೊಡದೇ ಇದ್ದಾಗ, ಆ ನಿಸ್ತೇಜಿತ ದೇಹಗಳನ್ನು ಹೂಳುವಾಗ ಅಥವಾ ಸುಡುವಾಗ ಅದಕ್ಕೆ ಹೊರಗಿನ ಪ್ರಪಂಚ ಪ್ರತಿಕ್ರಿಯಿಸುವ ರೀತಿಯನ್ನು ಕಂಡಾಗ ಆ ಮೂವರು ಅಕ್ಕ ತಂಗಿ ಅಣ್ಣನ ಮನಸ್ಸಿನಲ್ಲಿ ಉಂಟಾಗಬಹುದಾದ ಭಾವನೆಗಳು ಏನೋ ಎಂತೋ. ಇದು ಎರಡನೆಯ ಹಂತವಾದರೆ ಮೂರನೆಯ ಹಂತದಲ್ಲಿ ಈ ಎಲ್ಲಾ ಕಾರ್ಯಗಳು ಮುಗಿದ ನಂತರ ಅವರ ಹತ್ತಿರದ ಬಂಧುಗಳು, ಹಿತೈಷಿಗಳು ಇವರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ಬಹಳ ಮುಖ್ಯವಾಗುತ್ತದೆ.

ಸತ್ತವರ ತಂದೆ ತಾಯಿಗಳು ಅವರ ಇತರ ರಕ್ತ ಸಂಬಂಧಿಗಳ ಜೊತೆ ಯಾವ ರೀತಿಯ ಸಂಪರ್ಕಗಳನ್ನು ಹೊಂದಿದ್ದರು, ಅವರೊಂದಿಗೆ ಉತ್ತಮ ಒಡನಾಟವಿತ್ತೋ ಅಥವಾ ಸಂಘರ್ಷವಿತ್ತೋ, ಆ ದಂಪತಿ ನಿಜಕ್ಕೂ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದರೋ, ಸಾಧಾರಣ ಸ್ಥಿತಿಯಲ್ಲಿದ್ದರೋ, ಸಾಲಗಾರರಾಗಿದ್ದರೋ ಈಗಷ್ಟೇ ಗೊತ್ತಾಗುವ ವಿಷಯ. ಅವರ ಬ್ಯಾಂಕಿನ ಅಕೌಂಟಿನಲ್ಲಿ ಎಷ್ಟು ಹಣವಿತ್ತೋ, ಇವರು ಯಾರಿಗೆ ಕೊಡಬೇಕಿತ್ತೋ, ಇವರಿಗೆ ಇನ್ಯಾರು ಕೊಡಬೇಕಿತ್ತೋ ಅದೆಲ್ಲವೂ ಮತ್ತೊಂದು ಹಂತ.

ಮುಂದಿನ ಹಂತದಲ್ಲಿ ಈ ಮಕ್ಕಳ ಭವಿಷ್ಯ. ಮುಖ್ಯವಾಗಿ ಈಗಿರುವ ಹಂತದಿಂದ ಮುಂದುವರಿಯಬೇಕಾದ ಶಿಕ್ಷಣ ಬಹುದೊಡ್ಡ ಸವಾಲನ್ನು ಒಡ್ಡುತ್ತದೆ. ಏಕೆಂದರೆ 5, 7 ಮತ್ತು 10 ರ ಮಕ್ಕಳಿಗೆ ಈಗಿನ ಕಾಲದಲ್ಲಿ ಬಹುತೇಕ ಖಾಸಗಿ ಶಾಲೆಯಲ್ಲಿ ಓದಿಸುತ್ತಿರುವುದರಿಂದ ಆ ಶಾಲೆಯ ಫೀಸನ್ನು ತುಂಬಬೇಕಾಗುತ್ತದೆ. ಜೊತೆಗೆ ಮತ್ತೆ ಮುಂದಿನ ವರ್ಷವೂ ಇದನ್ನು ನಿರಂತರವಾಗಿ ಕಟ್ಟಬೇಕಾಗುತ್ತದೆ. ಸ್ವಂತ ಮಕ್ಕಳಿಗೆ ಕಟ್ಟುವುದೇ ತುಂಬಾ ಕಷ್ಟವಾಗಿರುವಾಗ ಇವರ ದುಡ್ಡು ಕಟ್ಟುವವರು ಯಾರು? ಮನೆಯ ಬಾಡಿಗೆ ಕಟ್ಟುವವರಾರು ಹಾಗೂ ನಾಳೆಯಿಂದ ಇವರಿಗೆ ಊಟವನ್ನು ನೀಡುವವರು ಯಾರು?

ಏಕೆಂದರೆ ಮೂವರು ಪುಟ್ಟ ಮಕ್ಕಳು. ನಗರೀಕರಣದ ಪ್ರಭಾವದಿಂದ ಬಹುತೇಕ ಎಲ್ಲರ ಬದುಕು ವೇಗ ಮತ್ತು ಸ್ಪರ್ಧೆಯಿಂದಾಗಿ ಯಾರನ್ನು ಯಾರೂ ವಿಚಾರಿಸಿಕೊಳ್ಳುವ, ಕೇರ್ ಮಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಪ್ರಾರಂಭದಲ್ಲಿ ಒಂದಷ್ಟು ಸಹಾಯ ಮಾಡಬಹುದೇ ಹೊರತು ಬೇರೆಯವರ ಮಕ್ಕಳಿಗೆ ನಿರಂತರವಾಗಿ ಪೋಷಕರಾಗಲು ಸಾಧ್ಯವಿಲ್ಲ. ಈ ಹಂತ ದಾಟಿದ ನಂತರ ಆ ಮಕ್ಕಳ ಸ್ವಭಾವ ಏನಿದೆಯೋ ಏನೋ. ಅಪ್ಪ ಅಮ್ಮ ಆಗಿದ್ದರೆ ಮಕ್ಕಳ ಎಲ್ಲಾ ಸ್ವಭಾವಗಳನ್ನು ಸಹಿಸಿಕೊಳ್ಳುತ್ತಾರೆ. ಕೆಟ್ಟ ಸ್ವಭಾವವೂ ಒಳ್ಳೆಯದಾಗಿ ಕಾಣುತ್ತದೆ. ಆದರೆ ಇತರರಿಗೆ ಅವರ ಒಳ್ಳೆಯ ಸ್ವಭಾವವೂ ಕೆಟ್ಟದಾಗಿ ಕಾಣುವ ಸಾಧ್ಯತೆಯೇ ಹೆಚ್ಚು. ಈ ಮಕ್ಕಳನ್ನು ಪೋಷಿಸುವವರ ಗುಣ, ನಡತೆ ಸ್ವಭಾವ ಹೇಗಿರುತ್ತದೋ ಏನೋ. ಅದು ಇನ್ನೊಂದು ಸವಾಲನ್ನು ಒಡ್ಡುತ್ತದೆ.

ಇವರು ಅನಾಥ ಮಕ್ಕಳೆಂದು ತಿಳಿದ ಮೇಲೆ ಈ ಸಮಾಜ ಇವರುಗಳನ್ನು ಹೇಗೆ ನಡೆಸಿಕೊಳ್ಳುತ್ತದೆ? ಇದು ಎಲ್ಲರಿಗೂ ತಿಳಿದ ವಿಚಾರವೇ. ಕೆಲವು ಪಾಶ್ಚಾತ್ಯ, ಮುಂದುವರಿದ ದೇಶಗಳಲ್ಲಿ ಅನಾಥ ಮಕ್ಕಳನ್ನು ಅತ್ಯಂತ ಗೌರವ, ಪ್ರೀತಿ, ಅಭಿಮಾನ, ಜವಾಬ್ದಾರಿಯಿಂದ ನಡೆಸಿಕೊಳ್ಳಲಾಗುತ್ತದೆಯಂತೆ. ಆದರೆ ಭಾರತದಲ್ಲಿ ಖಂಡಿತವಾಗಲೂ ಆ ಪರಿಸ್ಥಿತಿ ಇಲ್ಲ. ಅಸಹಾಯಕರು, ಅಮಾಯಕರು, ಗತಿ ಇಲ್ಲದ ಅನಾಥರು ಎಂದು ಅರ್ಥವಾದ ಮೇಲೆ ಬಹುತೇಕ ಅವರನ್ನು ದುರುಪಯೋಗಪಡಿಸಿಕೊಳ್ಳುವುದೇ ಹೆಚ್ಚು. ಅದನ್ನು ಭಾರತದ ಎಲ್ಲಾ ಭಾಷೆಯ ಚಲನಚಿತ್ರಗಳಲ್ಲಿ ನೀವು ಗಮನಿಸಿರಬಹುದು.

ಈಗ ಮುಂದಿನ ಹಂತದಲ್ಲಿ ಆ ಮಕ್ಕಳು ಒಟ್ಟಿಗೆ ಇರುತ್ತಾರೋ, ಬೇರೆ ಬೇರೆ ಮಾಡುತ್ತಾರೋ, ಯಾವ ಮಗು ಶಾಲೆಗೆ ಹೋಗುತ್ತದೋ, ಇನ್ಯಾವ ಮಗು ಕೆಲಸಕ್ಕೆ ಹೋಗುತ್ತದೋ ಬಲ್ಲವರಾರು. ಅವರಿಗೆ ತುಂಬಾ ಆತ್ಮೀಯ ಚಿಕ್ಕಪ್ಪ, ದೊಡ್ಡಪ್ಪ, ಅತ್ತೆ, ಮಾವ, ಅಜ್ಜ, ಅಜ್ಜಿ ಇದ್ದರೆ ಏನೋ ಒಂದಷ್ಟು ದುರಾದೃಷ್ಟದಲ್ಲೂ ಅದೃಷ್ಟವಿರುತ್ತದೆ. ಇಲ್ಲದಿದ್ದರೆ ಬೀದಿ ನಾಯಿಗಿಂತ ಕಡೆಯಾಗುವ ಸಾಧ್ಯತೆ ಹೆಚ್ಚು. ಈ ಒಂದು ಅಜಾಗರೂಕ ವಾಹನ ಚಾಲನೆಯಿಂದ ಅಥವಾ ನಿರ್ಲಕ್ಷ್ಯದಿಂದ ಬದುಕು ದಿಢೀರನೆ ಹೇಗೆ ಬದಲಾಗಬಹುದು ಊಹಿಸಿ.

ಸತ್ತವರಿಗೆ ಅದೇ ಕೊನೆ. ಆದರೆ ಅವರ ಅವಲಂಬಿತರಿಗೆ ಬದುಕು ಪ್ರಾರಂಭವಾಗುವುದೇ ಇಲ್ಲಿಂದ. ಇದು ಒಂದು ಕುಟುಂಬದ ಒಂದು ಕಥೆ ಮಾತ್ರ. ಹೀಗೆ ಸಾವಿಗೀಡಾಗುವ ಅನೇಕ ಕುಟುಂಬಗಳ ಕಥೆ ನಿರಂತರವಾಗಿ ಭಾರತೀಯ ಸಮಾಜದಲ್ಲಿ ನಡೆಯುತ್ತಲೇ ಇರುತ್ತದೆ. ಇದನ್ನು ಹೇಗೆ ಸ್ವೀಕರಿಸಬೇಕು ಎಂಬುದು ಅವರವರಿಗೆ ಅವರವರ ವಿವೇಚನೆಗೆ ಬಿಟ್ಟದ್ದು.

ಇತರರ ಕಷ್ಟಗಳಿಗೆ ಮರುಗುವುದು ಬೇರೆ, ನಾವೇ ಆ ಕಷ್ಟದಲ್ಲಿ ಸಿಕ್ಕಿಹಾಕಿಗೊಂಡಾಗ ಆಗುವ ಅನುಭವವೇ ಬೇರೆ, ವಿಮರ್ಶಾತ್ಮಕವಾಗಿ ಬರೆಯುವುದೇ ಬೇರೆ. ಸಮಾಜವೆಂದರೆ ಹೀಗೆಯೇ ಅಥವಾ ಇದಕ್ಕಿಂತ ಉತ್ತಮ ಮಟ್ಟದ ಜೀವನ ಸಾಗಿಸಲು ಸಾಧ್ಯವೇ. ಒಂದು ಅತ್ಯುತ್ತಮ ನಾಗರಿಕ ಸಮಾಜ ನಿರ್ಮಿಸಲು ನಾವು ಏನು ಮಾಡಬೇಕು, ನಮ್ಮ ಬದುಕು ಹೆಚ್ಚು ಸುಖಮಯವಾಗಲು ಹೇಗೆ ಬಾಳಬೇಕು, ಇದೆಲ್ಲವೂ ಬದುಕೊಡ್ಡುವ ಬಹುದೊಡ್ಡ ಸವಾಲೇ ಅಥವಾ ಬದುಕಿರುವುದೇ ಹೀಗೆ ಎಂದು ಭಾವಿಸಬೇಕೇ? ಯೋಚಿಸಿದಂತೆಲ್ಲಾ ಮುಗಿಯದ ಈ ಪಯಣದ ಹಾದಿಯಲ್ಲಿ ಸುಮ್ಮನೆ ಈ ಮುಂಜಾನೆ ಬೆಳದಿಂಗಳಲ್ಲಿ ಆಕಾಶದತ್ತ ದಿಟ್ಟಿಸುತ್ತಾ, ಚಂದ್ರನನ್ನು ನೋಡುತ್ತಾ, ನಕ್ಷತ್ರಗಳನ್ನು ಎಣಿಸುತ್ತಿದ್ದೇನೆ.



# ಕುಡುಗೋಲು, ಕತ್ತರಿಗಳಿಗೆ ಸಾಣೆ ಹೇಗೆ?

ಹನಿ ಹನಿ ಗೂಡಿದರೆ ಹಳ್ಳ
ತೆನೆ ತೆನೆ ಗೂಡಿದರೆ ಬಳ್ಳ

ಹಿರಿಯ ಸಾಹಿತಿವರೇಣ್ಯರ ಈ ಸಾಲುಗಳಲಿ ಎಷ್ಟೊಂದು ಅರ್ಥವಿದೆ.

ಅದರಂತೆ ಒಂದೊಂದು ಮಳೆಹನಿಯಿಂದ ಹೇಗೆ ನೀರು ತುಂಬಿ ಹರಿಯುವುದೋ ಹಾಗೆ ನಮ್ಮ ಬರವಣಿಗೆಯ ಶೈಲಿ, ಓದುವಿಕೆ ಎಲ್ಲವೂ ಇರಬೇಕು. ಅಮ್ಮ ಎನ್ನುವ ಆರಂಭದಿಂದ ಸುಂದರವಾಗಿ ಓದಲು ಬರೆಯಲು ಕಲಿಸಿ ಕಲಿಯುವುದು ನಮ್ಮ ಧ್ಯೇಯವಾಗಿರಬೇಕು. ಅಆಇಈ ವರ್ಣಮಾಲೆ, ಕನ್ನಡದ ಮೊದಲ ಅಕ್ಷರಗಳನ್ನು ತಪ್ಪಿಲ್ಲದೆ ಓದಿ ಬರೆದು ಒಂದೊಂದೇ ಹಂತಗಳನ್ನು ದಾಟಿದರೆ ಬರೆಯುವ ಪದಗಳಲ್ಲಿ ಕೊರತೆ ಕಾಣಿಸದು. ಅದೇ ಸರಿಯಾಗದೆ ಒಮ್ಮೆಯೇ ಬರೆಯುತ್ತೇನೆಂದು ಹೊರಟರೆ ಜೀವಮಾನವಿಡೀ ತಿದ್ದಲಾಗದು. ಎಳವೆಯಲ್ಲಿಯೇ ತಪ್ಪಿಲ್ಲದೆ ಬರೆಯಲು ಕಲಿಯಬೇಕು, ಕಲಿಸಬೇಕು. ಇದಕ್ಕಲ್ಲವೇ ಪ್ರಾಥಮಿಕ ಶಾಲೆಗಳಲ್ಲಿ ಎರಡುಗೆರೆ, ಮೂರುಗೆರೆ, ಒಂದುಗೆರೆ ಕೋಪಿ ಬರೆಯುತ್ತಿದ್ದೆವು. ಆಗ ಯಾರೆಲ್ಲ ಔದಾಸಿನ್ಯ ಮಾಡಿರಬಹುದು, ಶಿಕ್ಷಕರ ಮಾತಿನಂತೆ ಬರೆದಿರಲಾರರು, ಅವರಿಗೆಲ್ಲ ಈಗ ಸರಿಯಾದ ಬರೆಯುವ ರೀತಿ ಇಲ್ಲದಿರಬಹುದು. ಕೆಲವೊಂದು ಸಲ ಅವಸರದ ಬರವಣಿಗೆಯೂ ಇರಬಹುದು. ಈಗಂತೂ ಈ ಅಂತರ್ಜಾಲದ ಮಹಿಮೆಯಲ್ಲಿ ಗಡಿಬಿಡಿಗೆ ಮುದ್ರಾಸುರನ ಹಾವಳಿಯೂ ಇರಬಹುದು. ಒಟ್ಟಿನಲ್ಲಿ ತಪ್ಪಿಲ್ಲದೆ ತಾಯ್ನುಡಿಯನ್ನು ಬರೆಯೋಣ, ಓದೋಣ ಸ್ನೇಹಿತರೇ. ಇದೇ ಕನ್ನಡಮ್ಮನಿಗೆ ನಾವು ಸಲಿಸುವ ಸೇವೆ ಗೌರವ.

ಅಸಲು-ಹಸಲು, ಕೊಳೆ-ಕೊಲೆ, ಕೋಳಿ-ಕೋಲಿ, ಶಾಲೆ-ಸಾಲೆ, ಆಸನ-ಹಾಸನ, ಹಾಲು-ಹಾಳು, ಅರ್ಥ ವ್ಯತ್ಯಾಸ ನೋಡಿ. ಸ್ಪಷ್ಟ ಬರೆಹ ಕಲಿತರೆ ನಮಗೆ ಒಳ್ಳೆಯದು. ಪುಟ್ಟ ಮಕ್ಕಳು ಓದುವಾಗ, ಬರೆಯುವಾಗ ಗಟ್ಟಿ ಸ್ವರದಲ್ಲಿ ಓದಲು ಹೇಳಬೇಕು,ಆಗ ನಮಗೆ ಕೇಳಿಸುತ್ತ ದೆ,ಅಲ್ಲಿಯೇ ತಿದ್ದಿ ಹೇಳಿಕೊಡಬಹುದು. (ನಾನು ಮನೆಯಲ್ಲಿ, ಶಾಲೆಯಲ್ಲಿ ಈ ಪ್ರಯೋಗ ಮಾಡಿ ಫಲ ಪಡೆದಿರುವೆನು)



ಒಂದೊಂದೇ ವಿದ್ಯೆಯ ಹಂತಗಳನ್ನು ಕಲಿತು ಅನುಭವ ಹೊಂದೋಣ. ತಂದೆ-ತಾಯಿ, ಗುರು-ಹಿರಿಯರು, ಭಗವಂತ ಎಲ್ಲರಲ್ಲೂ ಗೌರವ, ಪ್ರೀತಿ, ನಂಬಿಕೆ, ವಿಶ್ವಾಸವಿರಲಿ, ಆಗ ಅವರೆಲ್ಲರ ಆಶೀರ್ವಾದ ಖಂಡಿತಾ ಇದೆ. ಸಮರ್ಥ ಬರಹಗಾರರಿಗೆ, ವಿದ್ಯೆಯನ್ನು ಕಲಿತವನಿಗೆ, ಸಾಹಿತಿಗಳಿಗೆ ಸಮತೂಕದ ಮಾತುಗಾರನಿಗೆ ಎಲ್ಲಿ ಹೋದರೂ ಮನ್ನಣೆಯಿದೆ. ಬರಿಯ ಪದಗಳ ನೇಯ್ಗೆ ಕವನ/ಕವಿತೆಯಾಗದು. ಒಂದಷ್ಟು ಅಲಂಕಾರವಿತ್ತಾಗ, ಮಾಧುರ್ಯ ತುಂಬಿದಾಗ, ಭಾವನೆಗಳ ಸಾಗರ ಜೊತೆಗೂಡಿದಾಗ, ಉತ್ತಮ ಪದಗಳಿಂದ ರಚನೆಯಾದಾಗ, ಅಂದದ ಮೊಗಕ್ಕೆ ಒಂದು ಚಂದದ ತಿಲಕವಿಟ್ಟಂತೆ, ದೃಷ್ಟಿಬೊಟ್ಟು ಇಟ್ಟಂತೆ ಶೋಭಾಯಮಾನವಾಗಬಹುದು. ನಾಲ್ಕು ಜನ ಬರಹಗಾರರು ಓದಿ ಆಸ್ವಾದಿಸುವರು. ಇಲ್ಲದಿದ್ದರೆ ವಾಕ್ಯರೂಪದ ಹೇಳಿಕೆಯಂತಾಗಬಹುದು. ಪ್ರಾಸಗಳೇ ಕವನವಾಗದು. ಅಗತ್ಯವಿದ್ದಲ್ಲಿ, ಅನಿವಾರ್ಯವಾದಲ್ಲಿ ಪ್ರಾಸ ಇರಲಿ. ಒಟ್ಟಾರೆ ಪ್ರಾಸ ತುರುಕಿದರೆ ಅದನ್ನು ಓದುವುದು ಬಿಡಿ, ಮನಸ್ಸಿಗೂ ಹಿತವಾಗದು, ಅದು ಕಬ್ಬಿಣದ ಕಡಲೆಯಷ್ಟೆ.

ಕುಡುಗೋಲು, ಕತ್ತರಿಗಳಿಗೆ ಸಾಣೆ ಹೇಗೆ? ನೆಲಕ್ಕೆ ಉಳುಮೆ ಹೇಗೆ? ಗಿಡಕ್ಕೆ ಕಸಿಕಟ್ಟಿದಾಗ ಫಲ ಹೇಗೆ ಸಿಗುವುದೋ, ಅದನ್ನು ಉಳಿಸಲು ನಮ ಶ್ರಮವಿದ್ದ ಹಾಗೆ. ಕವಿಗೆ ನಿರಂತರ ಅಭ್ಯಾಸ ಹಾಗಿರಬೇಕು. ಅಧ್ಯಯನ ಶೀಲನಿಗೆ ವಿದ್ಯೆಯ ಕೊರತೆ ಕಾಣಿಸದು. ಸುಲಲಿತವಾಗಿ ಕನ್ನಡ ಪದಗಳನ್ನು ಓದಿ ಬರೆದು ತಾಯಿಯ ಸೇವೆಯನ್ನು ಗೈಯೋಣ.

**- ರತ್ನಾ ಕೆ.ಭಟ್** ತಲಂಜೇರಿ

# ಗ್ಯಾರಂಟಿ ಯೋಜನೆ: ಜಿಲ್ಲೆಯಲ್ಲಿ ಸಾವಿರಾರು ಕೋ. ರೂ. ವಿನಿಯೋಗ

## ಗೃಹಲಕ್ಷ್ಮೀಯರಿಗೆ 1,870 ಕೋಟಿ ರೂ. | ಶಕ್ತಿ ಯೋಜನೆಗೆ 605.34 ಕೋಟಿ ರೂ. ವೆಚ್ಚ

• ಪ್ರಜೋದಯ ವರದಿ




**ಹಾಸನ:** ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ, ಶಕ್ತಿ ಯೋಜನೆಗಳನ್ನು ಜಿಲ್ಲೆಯಲ್ಲಿ ಶೇ.90 ರಷ್ಟು ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಗಳಿಗಾಗಿ ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು ಸಾವಿರಾರು ಕೋಟಿ ರೂ. ವಿನಿಯೋಗಿಸಲಾಗಿದೆ.

ಗೃಹಲಕ್ಷ್ಮೀ ಯೋಜನೆಯಡಿ ಮನೆ ಯಜಮಾನಿಗೆ ಮನೆ ನಡೆಸಲು ಅನುಕೂಲವಾಗುವಂತೆ ಪ್ರತಿ ತಿಂಗಳು 2 ಸಾವಿರ ರೂ. ನಂತೆ ಜಿಲ್ಲೆಯ 4,41,367 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗಿದೆ. 2023 ಆಗಸ್ಟ್ ತಿಂಗಳಿನಿಂದ 2025 ಜುಲೈ ತಿಂಗಳವರೆಗೂ ಒಟ್ಟು 1,870 ಕೋಟಿ ರೂ. ಹಣವನ್ನು ನೇರವಾಗಿ ಮಹಿಳೆಯರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಲಾಗಿದೆ. ಇನ್ನೂ ಮೂರು ತಿಂಗಳ ಹಣ ಬಾಕಿ ಉಳಿದಿದೆ.

ಗೃಹಲಕ್ಷ್ಮೀ ಯೋಜನೆ ಸೌಲಭ್ಯ ಪಡೆದುಕೊಳ್ಳಲು ಕೆಲ ತಾಂತ್ರಿಕ ಕಾರಣಗಳಿಂದ ಶೇ.100 ರಷ್ಟು ಗುರಿ ಸಾಧಿಸಲು ಸಾಧ್ಯವಾಗಿಲ್ಲ. ಪಡಿತರ ಚೀಟಿ, ಆಧಾರ್ ಕಾರ್ಡ್‌ಗಳಲ್ಲಿನ ದೋಷವೇ ಸೌಲಭ್ಯ ಪಡೆದುಕೊಳ್ಳಲು ತೊಡಕಾಗಿದೆ.

**ಶಕ್ತಿ ಯೋಜನೆಯಡಿ ಎಲ್ಲರಿಗೂ ಸೌಲಭ್ಯ**

ಶಕ್ತಿ ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದ ಎಲ್ಲಾ ವರ್ಗದ ಮಹಿಳೆಯರ ಸಬಲೀಕರಣಕ್ಕಾಗಿ ಉಚಿತವಾಗಿ ಬಸ್ ಪ್ರಯಾಣ ಸೌಲಭ್ಯವನ್ನು ಜಿಲ್ಲೆಯಲ್ಲಿ 2023 ಜೂನ್ 11 ರಿಂದ 2025 ಅಕ್ಟೋಬರ್ ಅಂತ್ಯದವರೆಗೂ ಒಟ್ಟು 17.73 ಕೋಟಿ ಮಹಿಳೆಯರು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಉಚಿತವಾಗಿ ಪ್ರಯಾಣ ಮಾಡಿದ್ದರೆ. ಈ ಯೋಜನೆಗಾಗಿ ಜಿಲ್ಲೆಯಲ್ಲಿ ಒಟ್ಟು 605.34 ಕೋಟಿ ರೂ. ವೆಚ್ಚ ಮಾಡಲಾಗಿದೆ.

ಶಕ್ತಿ ಯೋಜನೆಯ ಪ್ರಯೋಜನ ಪಡೆದುಕೊಳ್ಳಲು ಆಧಾರ್ ಕಾರ್ಡ್ ಪ್ರಮುಖ ಮಾನದಂಡವಾಗಿರುವುದರಿಂದ ಎಲ್ಲಾ ವರ್ಗದ ಮಹಿಳೆಯರು, ವಿದ್ಯಾರ್ಥಿಗಳು, ಉದ್ಯೋಗಸ್ಥ ಮಹಿಳೆಯರು ಪ್ರತಿದಿನ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಉಚಿತ ಬಸ್ ಸೌಲಭ್ಯ ದೊರಕಿದಾಗಿನಿಂದ ಬಸ್‌ಗಳಲ್ಲಿ ಸಂಚಾರ ಮಾಡುವವರ ಸಂಖ್ಯೆ ದುಪ್ಪಟ್ಟಾಗಿದೆ. ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್‌ಗಳು ಇಲ್ಲದೆ ಇರುವುದು ಸಮಸ್ಯೆ ಉಂಟಾಗಿದೆ.

**ಅನ್ನಭಾಗ್ಯ ಯೋಜನೆ**

ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿ ಹೊಂದಿರುವ ಪ್ರತಿ ವ್ಯಕ್ತಿಗೆ ಮಾಹೆಗೆ 10 ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಜಿಲ್ಲೆಯಲ್ಲಿ ಬಿಪಿಎಲ್, ಎಪಿಎಲ್, ಅಂತ್ಯೋದಯ ಪಡಿತರ ಚೀಟಿ ಸೇರಿ ಒಟ್ಟು 4,96,580 ಪಡಿತರ ಕಾರ್ಡ್‌ದಾರರು ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಈ ಯೋಜನೆಯಡಿ ಪ್ರತಿ ತಿಂಗಳು 72 ಸಾವಿರ ಕ್ವಿಂಟಾಲ್ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ.

ಇತ್ತೀಚೆಗೆ ಪಡಿತರ ಚೀಟಿ ಪರಿಷ್ಕರಣೆಯಿಂದ ಹಲವರ ಕಾರ್ಡ್‌ಗಳು ರದ್ದುಗೊಂಡಿವೆ. ಅದರಲ್ಲಿ ಕೆಲ ಬಡವರ ಕಾರ್ಡ್‌ಗಳನ್ನು ಏಕಾಏಕಿ ರದ್ದುಪಡಿಸಿರುವುದು ಸಮಸ್ಯೆ ಉಂಟಾಗಿದೆ. ಹೊಸ ಕಾರ್ಡ್‌ಗಳ ಸೇರ್ಪಡೆ ಸರ್ವರ್ ಸಮಸ್ಯೆ, ಹೆಚ್ಚಿನ ಅವಕಾಶ ನೀಡದೆ ಇರುವುದು ಮತ್ತೊಂದು ರೀತಿಯ ತೊಡುಕಾಗಿದೆ.

**ಗೃಹಜ್ಯೋತಿ**

ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 5,39,681 ಗೃಹ ಬಳಕೆದಾರರಿದ್ದು, ಅದರಲ್ಲಿ 5,38,852 ಗ್ರಾಹಕರು ನೋಂದಣಿ ಮಾಡಿಕೊಂಡಿದ್ದಾರೆ. ಈ ಯೋಜನೆಯಡಿ ಸೆಪ್ಟೆಂಬರ್ ಅಂತ್ಯದವರೆಗೂ ಒಟ್ಟು 1,68,566 ಗ್ರಾಹಕರಿಗೆ ಶೂನ್ಯ ಬಿಲ್ ಪಡೆದುಕೊಂಡಿದ್ದಾರೆ.

**ಯುವನಿಧಿ**

ಯುವನಿಧಿ ಯೋಜನೆಯಡಿ ನಿರುದ್ಯೋಗ ಸಮಯದಲ್ಲಿ ಯುವಕರಿಗೆ ಸ್ಫೂರ್ತಿ ತುಂಬಿ ಉದ್ಯೋಗ ಹುಡುಕಲು ಅನುಕೂಲವಾಗುವಂತೆ ಶೈಕ್ಷಣಿಕ ಸಾಲಿನಲ್ಲಿ ಉತ್ತೀರ್ಣರಾಗಿ ಹೊರ ಬರುವ ಪಾಲಿಟೆಕ್ನಿಕ್ ಮತ್ತು ಪದವಿ ವಿದ್ಯಾರ್ಥಿಗಳಿಗೆ 6 ತಿಂಗಳವರೆಗೆ ಡಿಪ್ಲೋಮಾ ವ್ಯಾಸಂಗ ಮಾಡಿದವರಿಗೆ ಮಾಸಿಕ 1,500 ರೂ. ಹಾಗು ಪದವಿ ವ್ಯಾಸಾಂಗ ಮಾಡಿದವರಿಗೆ ಮಾಸಿಕ 2000 ರೂ. ನಂತೆ ಜಿಲ್ಲೆಯಲ್ಲಿ 2024 ಜನವರಿಯಿಂದ 2025 ಆಗಸ್ಟ್‌ವರೆಗೆ ಒಟ್ಟು 64,372 ಫಲಾನುಭವಿಗಳು ಸೌಲಭ್ಯ ಪಡೆದುಕೊಂಡಿದ್ದಾರೆ. ಈ ಯೋಜನೆಗಾಗಿ ಒಟ್ಟು 19.16 ಕೋಟಿ ರೂ. ವೆಚ್ಚ ಮಾಡಲಾಗಿದೆ.

**ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗೆ ವೆಚ್ಚ**

| ಯೋಜನೆ | ಫಲಾನುಭವಿಗಳು | ಒಟ್ಟು ವೆಚ್ಚ |
|---|---|---|
| ಯುವನಿಧಿ | 64,372 | 19.16 ಕೋಟಿ ರೂ. |
| ಗೃಹಲಕ್ಷ್ಮೀ | 4,41,367 | 1,870 ಕೋಟಿ ರೂ. |
| ಶಕ್ತಿಯೋಜನೆ | 17.73 ಕೋಟಿ | 605.34 ಕೋಟಿ ರೂ. |
| ಗೃಹಜ್ಯೋತಿ | 1,68,566 ಗ್ರಾಹಕರಿಗೆ ಶೂನ್ಯ ಬಿಲ್ | |
| ಅನ್ನಭಾಗ್ಯ | 4,96,580 ಕಾರ್ಡ್‌ದಾರರಿಗೆ ಸೌಲಭ್ಯ | |

## ಗುಂಡಿಬಿದ್ದ ರಸ್ತೆಯಲ್ಲಿ ಪ್ರಯಾಣಿಕರ ಪರದಾಟ

» ಮೊದಲನೇ ಪುಟದಿಂದ

ಪ್ರಯಾಣಿಕರು ಕೊಡುಗು ಜಿಲ್ಲೆ ಹಾಗು ದಕ್ಷಿಣ ಕನ್ನಡದ ಸುಬ್ರಹ್ಮಣ್ಯ ಘಾಟಿಗೆ ತೆರಳಲು ಪ್ರಮುಖವಾಗಿ ಈ ಮಾರ್ಗವನ್ನೆ ಹೆಚ್ಚಾಗಿ ಅವಲಂಬಿಸಿದ್ದಾರೆ. ಶನಿವಾರ ಹಾಗು ಭಾನುವಾರದ ರಜಾ ದಿನಗಳಲ್ಲಿ ಪಶ್ಚಿಮ ಘಟ್ಟದ ಪ್ರವಾಸಿ ತಾಣಗಳಿಗೆ ತೆರಳುವ ಪ್ರವಾಸಿಗರ ಓಡಾಟ ಮತ್ತಷ್ಟು ಹೆಚ್ಚಳವಾಗುತ್ತದೆ. ಹೀಗಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳಿಗಿಂತ ಹೆಚ್ಚಾಗಿ ಸಾವಿರಾರು ಸಂಖ್ಯೆಯಲ್ಲಿ ಸಂಚರಿಸುವ ಕಾರುಗಳು, ದ್ವಿಚಕ್ರ ವಾಹನಗಳ ದಟ್ಟಣೆಯಿಂದ ರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆಯ ಕಿರಿಕಿರಿ ಕೂಡ ತಪ್ಪುತ್ತಿಲ್ಲ. ದುರಾದೃಷ್ಟವಶಾತ್ ರಸ್ತೆ ವಿಸ್ತರಣೆಯಾಗಿ ಅಭಿವೃದ್ಧಿ ಕಾಣದೆ ಪ್ರಯಾಣಿಕರಿಗೆ ಗುಂಡಿಗಳ ನರಕ ದರ್ಶನವಾಗುತ್ತಿದ್ದು, ಭಯ ಬೀಳುವಂತಾಗಿದೆ.

ಪಶ್ಚಿಮ ಘಟ್ಟಗಳ ಮಲೆನಾಡ ಸೌಂದರ್ಯ ಸವಿಯಲು ಬರುವ ಪ್ರವಾಸಿಗರು ಹಾಸನ- ಸಕಲೇಶಪುರ ಕಡೆಯಿಂದ ಸುತ್ತಿ ಬಳಸುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿಯೂ ಹೆಚ್ಚಾಗಿ ಸಮೀಪದ ಈ ಮಾರ್ಗದ ರಸ್ತೆಯನ್ನೆ ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ, ಚನ್ನರಾಯಪಟ್ಟಣದ ಗನ್ನಿಕಡದಿಂದ ಶುರುವಾಗುವ ಗುಂಡಿ ಹೊಂಡಗಳು ಪ್ರಯಾಣಿಕರಿಗೆ ಹೊಳೆನರಸೀಪುರ ಹಾಗು ಅರಕಲಗೂಡು ತಲುಪುವ ತನಕ ತಲೆನೋವಾಗಿ ಪರಿಣಮಿಸಿದೆ.

ರಸ್ತೆ ಅಲ್ಲಲ್ಲಿ ಕೊರಕಲು ಬಿದ್ದು ಮಂಡಿಯುದ್ದ ಪ್ರಪಾತಕ್ಕೆ ಕುಸಿದಿದೆ. ತೀವ್ರ ಹದಗೆಟ್ಟಿರುವ ರಸ್ತೆಯಲ್ಲಿ ರಾತ್ರಿ ವೇಳೆ ಗುಂಡಿ ಹೊಂಡಕ್ಕೆ ಇಳಿದು ಅಪಾಯವನ್ನು ಲೆಕ್ಕಿಸದೆ ಸಂಚರಿಸುವ ದುಸ್ಥಿತಿ ಎದುರಾಗಿದೆ. ಪ್ರಯಾಣಿಕರ ಸುಗಮ ಸಂಚಾರಕ್ಕೆ ಸಂಚಕಾರ ತಂದೊಡ್ಡುತ್ತಿರುವ ಗುಂಡಿಗಳನ್ನು ಮುಚ್ಚಿ ರಸ್ತೆ ಅಭಿವೃದ್ಧಿ ಪಡಿಸಿ ವಾಹನಗಳ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂಬುದು ಸಾರ್ವಜನಿಕರ ಆಗ್ರಹವಾಗಿದೆ.

## ಸಪ್ನ ಬುಕ್ ಹೌಸ್‌ನಿಂದ ರಿಯಾಯಿತಿ ದರದಲ್ಲಿ ಪುಸ್ತಕ

**ಹಾಸನ:** ಕನ್ನಡ ರಾಜ್ಯೋತ್ಸವ ಅಂಗ ವಾಗಿ ದೇಶದ ಪ್ರತಿಷ್ಠಿತ ಪುಸ್ತಕ ಭಂಡಾರಗಳಲ್ಲಿ ಒಂದಾದ ಸಪ್ನ ಬುಕ್ ಹೌಸ್ ನವೆಂಬರ್ ತಿಂಗಳಲ್ಲಿ ಕನ್ನಡ ಪುಸ್ತಕಗಳಿಗೆ ಶೇ.10 ರಿಂದ 50ರ ವರೆಗೆ ರಿಯಾಯಿತಿ ಘೋಷಿಸಿದೆ.

ಹಾಸನ ಸೇರಿ ದೇಶಾದ್ಯಂತ 24 ಶಾಖೆಗಳನ್ನು ಸಪ್ನ ಒಳಗೊಂಡಿದೆ. ಕನ್ನಡ ಪುಸ್ತಕಗಳಿಗೆ ರಿಯಾಯಿತಿ ಘೋಷಿಸಿರುವುದು ಮಾತ್ರವಲ್ಲದೆ 500 ರೂ.ಗಿಂತ ಹೆಚ್ಚು ಮೌಲ್ಯದ ಪುಸ್ತಕ ಖರೀದಿಸಿದರೆ ಸದಸ್ಯತ್ವ ಕಾರ್ಡ್ ನೀಡು ತ್ತಿದ್ದು ಅದರ ನೆರವಿನಿಂದ ಮುಂದಿನ ದಿನಗಳಲ್ಲಿ ಎಲ್ಲಾ ಪುಸ್ತಕಗಳಿಗೆ ಶೇ.10 ರಷ್ಟು ರಿಯಾಯಿತಿ ಪಡೆಯಬಹುದು. ಜೊತೆಗೆ ಕಾಂಬೋ ಆಫರ್, ಒಂದು ಪುಸ್ತಕ ಖರೀದಿಸಿದರೆ ಮತ್ತೊಂದು ಪುಸ್ತಕ ಉಚಿತವಾಗಿ ನೀಡಲಾಗುತ್ತಿದೆ. ಪುಸ್ತಕ ಪ್ರೇಮಿಗಳು ಅದರ ಸದುಪಯೋಗ ಪಡೆಯಬೇಕೆಂದು ಸಪ್ನ ಬುಕ್‌ಹೌಸ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಕೋರಿದ್ದಾರೆ.

## ಕಾರು ಡಿಕ್ಕಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಅಪರಿಚಿತ ಕಾರು ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ರಾಷ್ಟ್ರೀಯ ಹೆದ್ದಾರಿ 75ರ ಮೇಟಿಕೆರೆ ಗೇಟ್ ಸಮೀಪ ನಡೆದಿದೆ.

ತಾಲ್ಲೂಕಿನ ಹಿರೀಸಾವೆ ನಿವಾಸಿ ರಾಧಾಕೃಷ್ಣ (69) ಮೃತರು. ರಾಷ್ಟ್ರೀಯ ಹೆದ್ದಾರಿ 75ರ ರಸ್ತೆಯಲ್ಲಿರುವ ಸಾರ್ವಜನಿಕ ಶೌಚಾಲಯದಲ್ಲಿ ಸ್ವಚ್ಛತಾ ಕೆಲಸ ಮಾಡಿಕೊಂಡಿದ್ದ ಅವರು ಕೆಲಸ ಮುಗಿಸಿ ಟೀ ಕುಡಿಯಲೆಂದು ರಸ್ತೆ ಬದಿ ನಡೆದು ಹೋಗುತ್ತಿದ್ದಾಗ ಬೆಂಗಳೂರು ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಸ್ ಹತ್ತುವಾಗ ಚಿನ್ನದ ಸರ ಕಳವು

• ಪ್ರಜೋದಯ ವರದಿ

**ಅರಕಲಗೂಡು:** ಬಸ್ ಹತ್ತುವಾಗ ನೂಕುನುಗ್ಗಲಿನಲ್ಲಿ ಮಹಿಳೆ ಕೊರಳಿಂದ 35 ಗ್ರಾಂ ತೂಕದ ಚಿನ್ನದ ಸರ ಎಗರಿಸಿರುವ ಘಟನೆ ತಾಲ್ಲೂಕಿನ ಕೇರಳಾಪುರದಲ್ಲಿ ನಡೆದಿದೆ.

ಮೈಸೂರು ಜಿಲ್ಲೆ ಕುಪ್ಪೆ ಗ್ರಾಮದ ಮೀನಾ ಎಂಬುವವರ ಸರ ಕಳುವಾಗಿದೆ. ನ.2 ರಂದು ಮದುವೆ ನಿಮಿತ್ತ ಕೇರಳಾಪು ರಕ್ಕೆ ಬಂದಿದ್ದ ಅವರು ವಾಪಾಸ್ ಊರಿಗೆ ಹೋಗುತ್ತಿದ್ದರು. ಬಸ್ ಅರ್ಧ ಕಿ.ಮೀ. ದೂರ ಹೋಗುತ್ತಿದ್ದಂತೆ ನೋಡಿಕೊಂಡಾಗ ಸರ ಇಲ್ಲದಿರುವುದು ಗೊತ್ತಾಗಿದೆ. ನೂಕುನುಗ್ಗಲಿ ನಲ್ಲಿ ಕಿಡಿಗೇಡಿಗಳು ಸರ ದೋಚಿದ್ದಾರೆ. ಅದರ ಒಟ್ಟು ಬೆಲೆ 4 ಲಕ್ಷ ರೂ. ಆಗಿದೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನ.9ಕ್ಕೆ ಗಣಪತಿ ಮೂರ್ತಿ ವಿಸರ್ಜನಾ ಮೆರವಣಿಗೆ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಗಂಡಸಿ ಶ್ರೀ ಪ್ರತ್ಯಕ್ಷ ಗಣಪತಿ ವಿಸರ್ಜನಾ ಮಹೋತ್ಸವ ನ.9ರಭಾನುವಾರ ನೆರವೇರಲಿದೆ.

75ನೇ ವರ್ಷದ ಅಮೃತ ಮಹೋತ್ಸವ ಹಾಗು ವಿಸರ್ಜನಾ ಕಾರ್ಯಕ್ರಮದ ಅಂಗವಾಗಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಸಂಜೆ 7 ಗಂಟೆಗೆ ವಿಸರ್ಜನಾ ಮೆರವಣಿಗೆ ಆರಂಭವಾಗಲಿದ್ದು, ಗಂಡಸಿ ಶ್ರೀ ಶಂಭುಲಿಂಗೇಶ್ವರಸ್ವಾಮಿ ಮಠದ ಶ್ರೀ ರೇವಣಸಿದ್ದೇಶ್ವರ ಸ್ವಾಮೀಜಿ, ನುಗ್ಗೇಹಳ್ಳಿ ಪುರವರ್ಗ ಮಠದ ಮಹೇಶ್ವರ ಸ್ವಾಮೀಜಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ಮಹಾ ಮಂಗಳಾರತಿ ನೆರ ವೇರಿಸುವರು. ವಿದ್ಯುತ್ ದೀಪ ಮತ್ತು ಹೂವಿನಿಂದ ಅಲಂಕೃತಗೊಂಡ ದರ್ಬಾರ್ ಮಂಟಪ ದಲ್ಲಿ ಶ್ರೀ ಸ್ವಾಮಿ ಯವರನ್ನು ಕೂರಿಸಿ ಕೀಲು ಕುದುರೆ ನರ್ತನ, ಲಿಂಗದ ವೀರರ ಕುಣಿತ, ಡ್ರಮ್ ಸೆಟ್ ವಾದ್ಯ, 10 ಅಡಿ ಆಂಜನೇಯನ ನೃತ್ಯ, ಮಹಿಳಾ ವೀರಗಾಸೆ ನರ್ತನ, ಚಿಟ್ಟಿ ಮೇಳ, ನಾದಸ್ವರ ವಾದ್ಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು.

ರಾತ್ರಿ 8 ಗಂಟೆಗೆ ಶ್ರೀ ಆಂಜನೇಯಸ್ವಾಮಿ ದೇವಾಲಯದ ಬಳಿ ಕಾರ್ಯಕ್ರಮಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಅನ್ನ ದಾಸೋಹ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸೋಮವಾರ ಬೆಳಿಗ್ಗೆ 8 ಗಂಟೆಗೆ ಗಂಡಸಿ ದೊಡ್ಡಕೆರೆಯಲ್ಲಿ ಗಣಪತಿ ಮೂರ್ತಿ ವಿಸರ್ಜಿಸಲಾಗುವುದು.

# ಆಂತರಿಕ ದೂರು ಸಮಿತಿ ರಚನೆ: ದೇಶದಲ್ಲಿ ರಾಜ್ಯಕ್ಕೆ 2ನೇ ಸ್ಥಾನ

» ಮೊದಲನೇ ಪುಟದಿಂದ

ಕಳೆದ ಮೂರು ದಿನದಿಂದ ಜಿಲ್ಲೆಯ ವಿವಿಧ ಕಾಲೇಜುಗಳಿಗೆ, ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ್ದೇನೆ. ಅರಕಲಗೂಡು ತಾಲ್ಲೂಕು ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗೂ ಸಹ ಭೇಟಿ ಮಾಡಿದ್ದೇನೆ. ಅಲ್ಲಿ ಕಂಡು ಬಂದಿರುವಂತಹ ಸಮಸ್ಯೆಗಳ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಕೆಲವೊಂದು ಆಸ್ಪತ್ರೆಗಳಲ್ಲಿ ತುರ್ತು ಮಾಡಬೇಕಾದ ಕೆಲಸಗಳನ್ನು ಮಾಡಿ 15 ದಿನಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸುತ್ತೇವೆಂದು ತಿಳಿಸಿದ್ದಾರೆ ಎಂದರು.

ಅರಕಲಗೂಡು ತಾಲ್ಲೂಕಿನಲ್ಲಿ ಯಾವುದೇ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಾಗಲಿ, ಪಾಲಿಟೆಕ್ನಿಕ್ ಕಾಲೇಜುಗಳಾಗಲಿ ಇಲ್ಲ. ಅದರಲ್ಲೂ ಹೆಣ್ಣು ಮಕ್ಕಳಿಗೆ ಯಾವ ಕಾಲೇಜುಗಳು ಇಲ್ಲದಿರುವುದರಿಂದ ಮಕ್ಕಳೆಲ್ಲರೂ ಜಿಲ್ಲೆಗೆ ಆಗಮಿಸಬೇಕು ಹಾಗಾಗಿ ಬಡ ಮಕ್ಕಳು ವಿದ್ಯಾಭ್ಯಾಸ ಮಾಡಲು ಅನು ಕೂಲವಾಗುವಂತೆ ಕಾಲೇಜುಗಳನ್ನು ತೆರೆಯುವಂತೆ ಮನವಿ ಮಾಡಿದ್ದಾರೆಂದು ತಿಳಿಸಿದರು.

ಪೊಲೀಸ್ ಠಾಣೆಯನ್ನು ಸಹ ಭೇಟಿ ಮಾಡಿದ್ದೇನೆ. ಜನರು ಠಾಣೆ ಯಲ್ಲಿ ದೂರುಗಳನ್ನು ಕೊಡಲು ಹೋದಾಗ ಸರಿಯಾಗಿ ಸ್ಪಂದಿಸುವುದಿಲ್ಲ, ಹೆಣ್ಣು ಮಕ್ಕಳಿಗೆ ಗೌರವ ಕೊಡುವುದಿಲ್ಲ, ಎಫ್‌ಐಆರ್ ಮಾಡುವುದಿಲ್ಲ ಎನ್ನುವ ಸಮಸ್ಯೆಗಳು ಹೆಚ್ಚಾಗಿ ಕೇಳಿಬರುತ್ತಿವೆ. ಇಂತಹ ಸಮಸ್ಯೆಗಳು ಕಂಡು ಬಂದಾಗ ಜನರು ಹಿರಿಯ ಪೊಲೀಸ್ ಅಧಿಕಾರಿಯ ಗಮನಕ್ಕೆ ತರಬೇಕು. ಪೊಲೀಸ್ ಠಾಣೆಯಲ್ಲಿ ಕ್ಯೂಆರ್ ಕೋಡ್ ಇರುತ್ತದೆ ಅದನ್ನು ಸ್ಕ್ಯಾನ್ ಮಾಡಿ ದೂರು ನೀಡಬೇಕು ಎಂದರು.

ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಅಧಿಕಾರಿಗಳು ಸೂಕ್ಷ್ಮತೆಯಿಂದ ವರ್ತಿಸುವಂತೆ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಿದ್ದೀರಿ ಎಂದು ವರದಿ ಯನ್ನು ಕೇಳಿದ್ದೇನೆ. ಇತ್ತೀಚೆಗಂತೂ ಮದುವೆಯಾದ ಎರಡೇ ವಾರಕ್ಕೆ, ನಾಲ್ಕು ತಿಂಗಳಿಗೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುತ್ತಿ ರುವಂತಹ ಪ್ರಕರಣಗಳು ಕಂಡು ಬರುತ್ತಿವೆ. ಈ ರೀತಿಯ ಕೇಸ್‌ಗಳನ್ನು ದಾಖಲುಮಾಡಿಕೊಳ್ಳಲು ಪ್ರತ್ಯೇಕ ಮಹಿಳಾ ಡೆಸ್ಕ್ ಇರುತ್ತದೆ. ಅಲ್ಲಿ ಯಾವ ರೀತಿಯಾಗಿ ಅವರನ್ನು ಕೌನ್ಸಿಲಿಂಗ್ ಮಾಡುತ್ತಾರೆಂಬುದು ಮುಖ್ಯವಾಗುತ್ತದೆ. ಹಾಗಾಗಿ ಕೌನ್ಸಿಲಿಂಗ್ ಮಾಡು ವುದಕ್ಕೆ ಕೆಲವು ವಿಧಾನಗಳಿವೆ. ಆ ವಿಧಾನಗಳ ಕುರಿತಾಗಿ ಆ ವಿಷಯದಲ್ಲಿ ಪರಿಣಿತರಿರುವ ತಜ್ಞರನ್ನು ಕರೆಸಿ ಪೊಲೀಸ್ ಅಧಿಕಾರಿ ಗಳಿಗೆ ತರಬೇತಿ ಕೊಡಬೇಕೆಂದು ತಿಳಿಸಿದರು.

ಈ ವರ್ಷ ಜಿಲ್ಲೆಯಲ್ಲಿ ಕಾಣೆಯಾಗಿರುವ ಮಹಿಳೆಯರ ಸಂಖ್ಯೆ 279, ಅವರಲ್ಲಿ 236 ಜನರನ್ನು ಕಂಡು ಹಿಡಿಯಲಾಗಿದೆ. ಇನ್ನು 43 ಜನರನ್ನು ಪತ್ತೆ ಹಚ್ಚ ಲಾಗಿಲ್ಲ. ಏಕೆ ಪತ್ತೆ ಮಾಡಲು ಆಗಿಲ್ಲ ಎಂಬುದರ ಕುರಿತಾಗಿ ನಮಗೆ ವರದಿಯನ್ನು ನೀಡಿದ್ದಾರೆ. ಅದರ ಕುರಿತಾಗಿ ಮಹಿಳಾ ಆಯೋಗಕ್ಕೆ ಹೋಗಿ ಅದನ್ನು ಪರಿಶೀಲನೆ ಮಾಡಿ ಪುನಃ ವರದಿ ನೀಡುತ್ತೇನೆಂದರು.

ಪೊಲೀಸ್ ಇಲಾಖೆ ಹಾಗೂ ಸಾರ್ವಜನಿಕರ ನಡುವೆ ಉತ್ತಮವಾದ ಭಾಂದವ್ಯ ಇರುವುದಕ್ಕೆ ಯಾವೆಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದ್ದಾರೆ ಎಂಬುದರ ಕುರಿತು ಕೇಳಿದಾಗ 368 ಬೀಟ್‌ಗಳನ್ನು ಮಾಡಿದ್ದಾರೆ. ಒಂದು ವರೆ ಲಕ್ಷ ವಾಟ್ಸಪ್ ಗ್ರೂಪ್‌ಗಳನ್ನು ಪೊಲೀಸ್ ಇಲಾಖೆ ಸಾರ್ವಜನಿಕರೊಂದಿಗೆ ರಚನೆ ಮಾಡಿದ್ದೇವೆಂದು ತಿಳಿಸಿದ್ದಾರೆ. ಯಾವುದೇ ಸಾರ್ವಜನಿಕ ವ್ಯಕ್ತಿಗೆ ಎಲ್ಲಿಯೇ ತೊಂದರೆ ಆದರೂ ಆ ವಾಟ್ಸಪ್ ಗ್ರೂಪ್ ನಲ್ಲಿ ಹಾಕಿದರೆ ಅಧಿಕಾರಿಗಳು ಅದರಲ್ಲಿ ಇರುತ್ತಾರೆ ಹಾಗೂ ಅದಕ್ಕೆ ಸ್ಪಂದಿಸುತ್ತಾರೆ. ಈ ರೀತಿಯ ಒಂದು ವ್ಯವಸ್ಥೆ ಪೊಲೀಸ್ ಇಲಾಖೆಯಲ್ಲಿ ಇದೆ ಎಂಬುದರ ಕುರಿತಾಗಿ ಎಲ್ಲರೂ ಮಾಹಿತಿಯನ್ನು ತಿಳಿದುಕೊಳ್ಳುವುದು ಅತ್ಯಗತ್ಯವಾಗಿದೆ. ಅದರಲ್ಲೂ ಹೆಚ್ಚಾಗಿ ಮಹಿಳೆಯರು ತಿಳಿದುಕೊಳ್ಳಬೇಕು ಎಂದರು.

ಶಾಲಾ-ಕಾಲೇಜುಗಳಿಗೆಭೇಟಿ ನೀಡಿ ತೆರೆದ ಮನೆ ಎಂಬ ಅರಿವು ಕಾರ್ಯಕ್ರಮ ಮಾಡಬೇಕು. ಗಾರ್ಮೆಂಟ್ಸ್, ಮಾರ್ಕೆಟ್‌ಗಳಂತಹ ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವಂತಹ ಮಹಿಳೆಯರಿಗೆ ದೌರ್ಜನ್ಯವಾದಾಗ ಎಲ್ಲಿ ಹೋಗಬೇಕು, ಹಾಗಾಗಿ ಅವರು ಕೆಲಸ ಮಾಡುತ್ತಿರುವ ಸ್ಥಳಗಳಲ್ಲಿ ಆಂತರಿಕ ದೂರು ಸಮಿತಿ ಇಲ್ಲದೆ ಇದ್ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಈ ಸಮಿತಿ ಇರುತ್ತದೆ ಎಂಬುದರ ಬಗೆಗೆ ಅವರಿಗೆ ಮಾಹಿತಿ ತಿಳಿಸಬೇಕೆಂದರು.

ಎಲ್ಲಾ ಗ್ರಾಮ ಪಂಚಾಯಿತಿಗಳ ಲ್ಲಿಯೂ 3 ತಿಂಗಳಿಗೊಮ್ಮೆ ಮಹಿಳಾ ಗ್ರಾಮ ಸಭೆ ಆಗಬೇಕು. ಇದರ ಕುರಿತಾಗಿಯೂ ವರದಿಯನ್ನು ಕೇಳಿದ್ದೇನೆ. ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿಯೂ ಕಾವಲು ಸಮಿತಿ ಇರಬೇಕು. ಅದರ ವರದಿಯನ್ನು ಸಹ ಕೇಳಿದ್ದೇನೆ ಎಂದು ತಿಳಿಸಿದರು.

ಜಿಲ್ಲೆಯ ಹಿಮ್ಸ್ ಆಸ್ಪತ್ರೆಯಲ್ಲಿ ಲೈಂಗಿಕ ದೌರ್ಜನ್ಯ ನಡೆದಿರುವ ಒಂದು ಪ್ರಕರಣದ ಕುರಿತು ಕೇಸ್ ದಾಖಲಾಗಿದೆ. ಅದರ ಬಗೆಗೆ ಸಂಬಂಧಪಟ್ಟವರು ಕ್ರಮವಹಿಸಬೇಕು. ಯಾವುದೇ ದೌರ್ಜ ನ್ಯದಿಂದ ಬರುವಂತಹ ಹೆಣ್ಣು ಮಕ್ಕಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಖಿ ಒನ್ ಸ್ಟಾಪ್ ಸೆಂಟರ್ ಅವರು ತಕ್ಷಣವೇ ಅವರಿಗೆ ಪೊಲೀಸ್ ಸಹಾಯ, ವೈದ್ಯಕೀಯ ವ್ಯವಸ್ಥೆ, ಉಳಿದುಕೊಳ್ಳುವುದಕ್ಕೆ ಸ್ಥಳವಾಗಿರಬಹುದು. ಎಲ್ಲವನ್ನೂ ಕೂಡ ವ್ಯವಸ್ಥೆ ಮಾಡಿಕೊಡುತ್ತಾರೆಂದರು.

## ಮಹಿಳೆಯರ ಆರ್ಥಿಕ ಸಬಲತೆಗೆ ಧರ್ಮಸ್ಥಳ ಸಂಘ ಸಹಕಾರಿ



• ಪ್ರಜೋದಯ ವರದಿ

**ಗಂಡಸಿ:** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಹಿಳೆಯರು ಸಾಮಾಜಿಕ, ಶೈಕ್ಷಣಿಕ ಹಾಗು ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯೋಜನಾಧಿಕಾರಿ ಉದಯ್ ಅವರು ಹೇಳಿದರು.

ತಾಲ್ಲೂಕಿನ ಕೆಂಕೆರೆ ಗ್ರಾಮದಲ್ಲಿ ಬುಧವಾರ ನಡೆದ ಶ್ರೀ ಬೆಂಕಿ ಬ್ರಹ್ಮಲಿಂಗೇಶ್ವರ ಜ್ಞಾನ ವಿಕಾಸ ಕೇಂದ್ರದ 8ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, ಜ್ಞಾನ ವಿಕಾಸ ಕೇಂದ್ರದಲ್ಲಿ ಮಹಿಳೆಯರ ಹಕ್ಕು ಮತ್ತು ಕಾನೂನು ಶಿಕ್ಷಣ, ಆರೋಗ್ಯ ಅರಿವು, ಸ್ವ-ಉದ್ಯೋಗ ತರಬೇತಿ, ಸರ್ಕಾರಿ ಯೋಜನೆಗಳ ಬಗ್ಗೆ ತಿಳಿವಳಿಕೆ, ಅಧ್ಯಯನ ಪ್ರವಾಸ, ಹೊಲಿಗೆ ತರಬೇತಿ, ಕೌಟುಂಬಿಕ ಸಾಮರಸ್ಯ ಮುಂತಾದ ವಿಷಯಗಳ ಬಗ್ಗೆ ಮಹಿಳೆಯರಿಗೆ ಅರಿವು ನೀಡಲಾಗಿದ್ದು ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆಯೆಂದರು.

ಕೇಂದ್ರ ಸಮಿತಿ ಸದಸ್ಯ ಗಾಯತ್ರಿ ದೇವಿ ಅಧ್ಯಕ್ಷತೆ ವಹಿಸಿದ್ದರು. ಕೆಂಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಹರೀಶ್, ನಿವೃತ್ತ ಶಿಕ್ಷಕ ಸೋಮ ಶೇಖರ್, ಜ್ಞಾನ ವಿಕಾಸ ಕೇಂದ್ರದ ಸಮನ್ವಯ ಅಧಿಕಾರಿ ಪದ್ಮಾವತಿ, ವಲಯ ಮೇಲ್ವಿಚಾರಕ ವಿನೋದ್, ಸೇವಾ ಪ್ರತಿನಿಧಿ ಮಹಾಲಕ್ಷ್ಮಿ, ದಿವ್ಯ, ಇಂದಿರಾ ಇತರರಿದ್ದರು. ಸಮಾರಂಭ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕೆಂಕೆರೆ ಜ್ಞಾನ ವಿಕಾಸ ಕೇಂದ್ರದ ಸದಸ್ಯೆ ಜಯಮ್ಮ ಅವರನ್ನು ಅದೃಷ್ಟದ ಮಹಿಳೆಯಾಗಿ ಸನ್ಮಾನಿಸಲಾಯಿತು.

# ಸಾಧಕರಿಗೆ ಅಡ್ಡಿಯಾಗದೆ ಪ್ರೋತ್ಸಾಹಿಸಿ: ಶೋಭಾ

• ಪ್ರಜೋದಯ ವರದಿ



**ಹೊಳೆನರಸೀಪುರ:** ಮನುಷ್ಯನ ಮಹತ್ತರ ಸಾಧನೆ ಹಿಂದೆ ಸಾವಿರಾರು ಸವಾಲುಗಳಿರುತ್ತವೆ, ಪ್ರತಿಭೆ ಮೂಲಕ ಏನನ್ನಾದರೂ ಸಾಧಿಸಲು ಪ್ರಯತ್ನಿಸುವವರಿಗೆ ಬೆಂಬಲ ನೀಡಬೇಕೆ ಹೊರತು ಅಡ್ಡಿಯಾಗಬಾರದೆಂದು ಕಾಲೇಜು ಹಾಗು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕಿ ಜಿ.ಶೋಭಾ ಅವರು ಹೇಳಿದರು.

ಪಟ್ಟಣದ ಸರ್ಕಾರಿ ಮಹಿಳಾ ಗೃಹ ವಿಜ್ಞಾನ ಕಾಲೇಜಿನಲ್ಲಿ ಬುಧವಾರ 2025-26ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ರೇಂಜರ್ಸ್ ಹಾಗು ರೆಡ್ ಕ್ರಾಸ್ ಘಟಕ ಉದ್ಘಾಟಿಸಿ ಮಾತನಾಡಿ, ನಿಮ್ಮಲ್ಲಿರುವ ಸಾಮರ್ಥ್ಯ, ಸಾಧಿಸಬೇಕೆಂಬ ಛಲ, ಕಲಿಕೆಯಲ್ಲಿ ಶ್ರದ್ಧೆಯೂ ಯಾವ ಚೌಕಟ್ಟಿಗೆ ಒಳಪಡುವುದಿಲ್ಲ. ಕಲಿಯಬೇಕೆಂಬ ಆತ್ಮವಿಶ್ವಾಸ, ಕಲಿಕೆಯ ತುಡಿತ, ಅಧ್ಯಯನದಲ್ಲಿ ಶ್ರದ್ಧೆ, ಗುರಿ ಸಾಧನೆಯಲ್ಲಿ ಛಲದ ಜೊತೆಗೆ ಗುರುವಿನ ಮಾರ್ಗ ದರ್ಶನ ಇದ್ದರೆ ಸಾಧನೆಯ ಶಿಖರವೇರಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಪ್ರಸ್ತುತ ದಿನಗಳಲಿ ಯುವಕರಿಗೆ ಕೆಲಸ ಸಿಗುತ್ತಿಲ್ಲವೆಂಬ ಮಾತು ವ್ಯಾಪಕವಾಗಿದೆ. ಆದರೆ ಕೌಶಲಗಳ ಕೊರತೆಯಿಂದಾಗಿ ಉದ್ಯೋಗ ದೊರೆಯುವುದು ಕಷ್ಟವಾಗಿದೆ. ಪದವಿ ಹಾಗು ಸ್ನಾತ್ತಕೋತ್ತರ ಶಿಕ್ಷಣ ಪಡೆಯುವ ಐದು ವರ್ಷದಲ್ಲಿ ದೊರೆಯುವ ಸದಾವಕಾಶವನ್ನು ಬಳಕೆ ಮಾಡಿಕೊಂಡು ಪದವಿ ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಆನ್‌ಲೈನ್ ಕೌಶಲಾಧಾರಿತ ವ್ಯಾಸಂಗ ಮಾಡುವ ಅವಕಾಶವಿದೆ. ಶಿಕ್ಷಣ, ಪಠ್ಯೇತರ ಚಟುವಟಿಕೆಗಳ ಜೊತೆಗೆ ಈ ರೀತಿಯ ಕೌಶಲಾಧಾರಿತ ಶಿಕ್ಷಣವು ಕಲಿಕಾ ಸಾಮರ್ಥ್ಯ ಹೆಚ್ಚಿಸುತ್ತದೆ. ಇಂದಿನ ಸ್ಪರ್ಧಾತ್ಮಕ ಹಾಗು ಜಾಗತಿಕ ಮಟ್ಟದ ಹೋರಾಟದಲ್ಲಿ ನಿಮ್ಮ ಪ್ರೌಢಿಮೆ ಅನಾವರಣಕ್ಕೆ ಉತ್ತಮ ಅವಕಾಶ ಕಲ್ಪಿಸ ಲಿದೆ. ಐದು ವರ್ಷದಲ್ಲಿ ನೀವು ಕಲಿಕೆ, ಜ್ಞಾನಾರ್ಧನೆ ಮತ್ತು ದೊರೆತ ಸಮಯದ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಪ್ರಗತಿ ಸಾಧಿಸಿದಲ್ಲಿ ಮುಂದಿನ ಐವತ್ತು ವರ್ಷಗಳ ನಿಮ್ಮ ಭವಿಷ್ಯ ಇತರರಿಗೆ ಮಾದರಿಯಾಗುವ ಜೊತೆಗೆ ನಿಮ್ಮ ಶಾಲೆ, ಪೋಷಕರು ಹೆಮ್ಮೆ ಪಡುವಂತೆ ಮಾಡುತ್ತದೆಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ,ಬಾಲಕಿಯ ರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಜಿ.ಧನ್ಯಕುಮಾರ್ ಮಾತನಾಡಿದರು.

ಪ್ರಾಧ್ಯಾಪಕ ಗಣೇಶ್ ಸ್ವಾಗತಿಸಿದರು. ಐಕ್ಯೂಎಸಿ ಘಟಕದ ಸಂಚಾಲಕ ಡಾ.ಅಶೋಕ್ ನಿರೂಪಿಸಿದರು. ಪ್ರಾಂಶುಪಾಲ ರಾದ ಆಶಾ ಜ್ಯೋತಿ, ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಕೃಷ್ಣಮೂರ್ತಿ, ರೇಂಜರ್ಸ್ ಘಟಕದ ಸಂಚಾಲಕಿ ಶ್ವೇತಾನಾಯಕ್, ದೈಹಿಕ ಶಿಕ್ಷಣ ನಿರ್ದೇಶಕ ಜಯಚಂದ್ರ, ಪ್ರಾಧ್ಯಾಪಕರಾದ ಸುನಿಲ್, ಜಗದೀಶ್, ಅಶೋಕ್, ಮಧುಶ್ರೀ, ಅಧೀಕ್ಷಕ ನವೀನ್, ಬೋಧಕೇತರ ಸಿಬ್ಬಂದಿ ಹಾಜರಿದ್ದರು.

## ಚಿನ್ನಾಭರಣ ಕಳವು

**ಚನ್ನರಾಯಪಟ್ಟಣ:** ಮಹಿಳೆ ಗಮನಕ್ಕೆ ಬಾರದಂತೆ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಅಂದಾಜು 35 ಗ್ರಾಂ ತೂಕದ ಚಿನ್ನಾಭರಣ ಕದ್ದಿರುವ ಘಟನೆ ಬೆಂಗಳೂರಿನಿಂದ ಚನ್ನರಾಯಪಟ್ಟಣಕ್ಕೆ ಬರುತ್ತಿದ್ದ ಬಸ್‌ನಲ್ಲಿ ನಡೆದಿದೆ.

ಪಟ್ಟಣದ ಉದಯಗಿರಿ ಬಡಾವಣೆ ನಿವಾಸಿ ಚೇತನ ಎಂಬುವವರ ಆಭರಣ ಕಳುವಾಗಿದೆ. ಬೆಂಗಳೂರಿನಲ್ಲಿ ವಾಸವಿರುವ ಅವರು ನ.1ರಂದು ಕುಟುಂಬಸ್ಥರೊಂದಿಗೆ ತಾಯಿಯ ಮನೆಯಾದ ಚನ್ನರಾಯ ಪಟ್ಟಣಕ್ಕೆ ಬರುತ್ತಿದ್ದರು. 4 ಲಕ್ಷ ರೂ. ಬೆಲೆಯ 35 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ, ಬೆಳ್ಳಿ ಕೈ ಬಳೆಯನ್ನು ಗಮನಕ್ಕೆ ಬಾರದಂತೆ ಕದ್ದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮನೆ ಬೀಗ ಮುರಿದು ಕಳ್ಳತನ

**ಹಾಸನ:** ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 1.26 ಲಕ್ಷ ರೂ. ಬೆಲೆಯ ಚಿನ್ನಾ ಭರಣ ಕದ್ದಿರುವ ಘಟನೆ ತಾಲ್ಲೂಕಿನ ಮಾರಿಗುಡಿಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಅಭಿ ಎಂಬುವವರು ನ.3 ರಂದು ಮನೆಗೆ ಬೀಗ ಹಾಕಿ ಕುಟುಂಬ ಸಮೇತ ತೆರಳಿದ್ದರು. ಕೆಲಸ ಸಮಯದ ಬಳಿಕ ವಾಪಾಸ್ ಬಂದು ನೋಡಿದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ. ಅಕ್ಕಿ ತುಂಬುವ ಡಬ್ಬದಲ್ಲಿಟ್ಟಿದ್ದ 8 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ, 6 ಗ್ರಾಂ ತೂಕದ ಒಂದು ಜೊತೆ ಚಿನ್ನದ ಜುಮುಕಿ, 5 ಗ್ರಾಂ ತೂಕದ ಒಂದು ಜೊತೆ ಚಿನ್ನದ ಮಾಟಿ, 4 ಗ್ರಾಂ ತೂಕದ ಚಿನ್ನದ ಗುಂಡು, 5 ಗ್ರಾಂ ತೂಕದ ಒಂದು ಚಿನ್ನದ ನಾಣ್ಯವನ್ನು ಕಳವು ಮಾಡಿ ದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಿಧನ



**ಆಲೂರು:** ಪಟ್ಟಣದ ಭಾರತ್ ಫುಟ್‌ವೇರ್ ಮಾಲೀಕ ನವೀದ್ ಅಹಮದ್ ಶರೀಪ್ (49) ಅವರು ಹೃದಯಾಘಾತದಿಂದ ಮಂಗಳವಾರ ರಾತ್ರಿ ನಿಧನರಾದರು. ಮೃತರಿಗೆ ತಂದೆ, ಪತ್ನಿ, ಓರ್ವ ಪುತ್ರ, ಪುತ್ರಿ, ಐವರು ಸಹೊದರರು, ಮೂವರು ಸಹೋದರಿಯರಿದ್ದಾರೆ. ಮೃತರ ಅಂತ್ಯ ಕ್ರಿಯೆ ಬುಧವಾರ ನೆರವೇರಿತು.

## ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಕುಂದೂರು ಹೋಬಳಿಗೆ ಹೊಸದಾಗಿ ಪರಿಶಿಷ್ಟ ಜಾತಿಯ ವಸತಿ ಶಾಲೆಯಾದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ(ಸಹ ಶಿಕ್ಷಣ) ಮಂಜೂರಾಗಿದೆ. ಸದರಿ ವಸತಿ ಶಾಲೆಗೆ ಬೋಧಕ ಹುದ್ದೆಗಳಿಗೆ ಗೌರವ ಧನ (16,650/-ತಿಂಗಳಿಗೆ)ದ ಆಧಾರದಲ್ಲಿ ಅತಿಥಿ ಶಿಕ್ಷಕರನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ನ.10 ಕಡೆ ದಿನವಾ ಗಿದೆ. ಅರ್ಜಿಯನ್ನು ವಸತಿ ಶಾಲೆ ಇ-ಮೇಲ್ ಅಥವಾ ಶಾಲಾ ಕಚೇರಿಗೆ ಖುದ್ದಾಗಿ ಸಲ್ಲಿಸಬಹುದು. ಮೊ.ನಂ.854 9070090 ಸಂಪರ್ಕಿಸಬಹುದೆಂದು ಪ್ರಾಂಶುಪಾಲರು ತಿಳಿಸಿದ್ದಾರೆ.

## ಡಿ.13ಕ್ಕೆ ಹನುಮ ಜಯಂತಿ: ಪೂರ್ವಭಾವಿ ಸಭೆ

» ಮೊದಲನೇ ಪುಟದಿಂದ

ಶೋಭಾಯಾತ್ರೆ ಸಂದರ್ಭ ದೊಡ್ಡ ವಾಹನಗಳಿಗೆ ಅವಕಾಶ ಇರುವುದಿಲ್ಲ. ಆಯೋಜಕರು ತಮ್ಮ ವಾಹನಗಳನ್ನು ಜೂನಿಯರ್ ಕಾಲೇಜು ಮೈದಾನದಲ್ಲಿ ನಿಲ್ಲಿಸಬೇಕು. ಮೆರವಣಿಗೆ ಹೊಳೆ ಬೀದಿಯಲ್ಲಿ ತೆರಳುವಾಗ ಡಿಜೆ ಶಬ್ಧ ಕಡಿಮೆ ಮಾಡಬೇಕು. ಅಂದು ಮದ್ಯ ದಂಗಡಿಯನ್ನು ಸಂಪೂರ್ಣ ಬಂದ್ ಮಾಡಿಸಲಾಗುವುದು ಎಂದು ಹೇಳಿದರು.

ಹನುಮ ಜಯಂತಿ ಆಚರಣಾ ಸಮಿತಿ ಮುಖಂಡರಾದ ಮೋಹನ್ ಹಾಗು ಸಂತೋಷ್ ಅವರು ಮಾತನಾಡಿ, ಹನುಮ ಜಯಂತಿಗೆ ಜಾತಿ, ಮತ, ಭೇದವಿಲ್ಲದೆ ಸಹಸ್ರಾರು ಜನರು ಪಾಲ್ಗೊಳ್ಳುತ್ತಾರೆ.ವರ್ತಕರು ಮಧ್ಯಾಹ್ನ ನಂತರ ಅಂಗಡಿ ಮುಂಗಟ್ಟು ಬಂದ್ ಮಾಡಿ ಮೆರವಣಿಗೆಯಲ್ಲಿ ಭಾಗವಹಿಸಬೇಕು. ಸಮಿತಿಯಿಂದ ಪೊಲೀಸ್ ಇಲಾಖೆಗೆ ಸಂಪೂರ್ಣ ಸಹಕಾರ ನೀಡುತ್ತೇವೆ. ಶೋಭಾಯಾತ್ರೆ ಮಧ್ಯಾಹ್ನ 1 ಗಂಟೆಗೆ ಪ್ರಾರಂಭವಾಗ ಲಿದ್ದು, ದೇವಾಲಯ ದ್ವಾರದ ಬಾಗಿಲ ಬಳಿ ಹಾರಗಳನ್ನು ತಂದು ಅರ್ಪಿಸಲು ಸೂಚನೆ ನೀಡಲಾಗಿದೆ ಎಂದರು. ಪಿಎಸ್‌ಐ ಶಿವನಗೌಡ ಜಿ.ಪಾಟೀಲ್, ಸಮಿತಿ ಸದಸ್ಯರು, ಭಕ್ತರು ವಿವಿಧಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

## ಗಾಂಜಾ ಮಾರಾಟ: ಅಸ್ಸಾಂ ಮೂಲದ ವ್ಯಕ್ತಿ ಬಂಧನ

» ಮೊದಲನೇ ಪುಟದಿಂದ

ಸುತ್ತಮುತ್ತ ಯಥೇಚ್ಛವಾಗಿ ತೋಟದ ಕೂಲಿ ಕೆಲಸ ಹಾಗು ಕಟ್ಟಡಗಳ ನಿರ್ಮಾಣ ಕೆಲಸ ಕಾರ್ಯಕ್ಕಾಗಿ ಅಸ್ಸಾಂ ಮತ್ತು ಇತರೆ ಹೊರ ರಾಜ್ಯಗಳಿಂದ ವಲಸೆ ಬರುವ ಕಾರ್ಮಿಕರ ಸಂಖ್ಯೆ ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದಂತೆ ಕಳವು ಪ್ರಕರಣಗಳೂ ಮರುಕಳಿಸುತ್ತಿರುವುದುಆತಂಕ ಮೂಡಿಸಿದೆ. ಜೊತೆಗೆ ಅಕ್ರಮ ಚಟು ವಟಿಕೆ ನಡೆಸುತ್ತಿರುವುದು ಸುತ್ತಮುತ್ತ ಲಿನ ಪರಿಸರವನ್ನು ಹಾಳುಮಾಡಲಾಗು ತ್ತಿದೆ ಎಂದು ಸ್ಥಳೀಯರು ಆರೋಪಿಸಿ ದ್ದಾರೆ.

ಮಲೆನಾಡು ಭಾಗದಲ್ಲಿ ಅಸ್ಸಾಂ ಸೇರಿ ಇನ್ನಿತರ ಭಾಗಗಳಿಂದ ಬಂದಿರುವ ವಲಸೆ ಕಾರ್ಮಿಕರಿಂದ ಕಳ್ಳತನ, ಗಾಂಜಾ ಮಾರಾಟ ಸೇರಿ ಇನ್ನಿತರೆ ಅಕ್ರಮ ಚಟುವಟಿಕೆ ನಡೆಯುತ್ತಿವೆ. ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು. ಇವರಿಗೆ ಆಶ್ರಯ ನೀಡಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

**ದೊಡ್ಡ ಇನ್ನಿಂಗ್ಸ್ ನಿರೀಕ್ಷೆಯಲ್ಲಿ ಉಪ ನಾಯಕ ಶುಭಮನ್ ಗಿಲ್**

# ಇಂದು ಆಸೀಸ್ ವಿರುದ್ಧ ನಾಲ್ಕನೇ ಟಿ-20 ಪಂದ್ಯ

• ಪ್ರಜೋದಯ ವರದಿ



**ಕರಾರ (ಗೋಲ್ಡ್‌ಕೋಸ್ಟ್):** ಭಾರತ ತಂಡವು ಗುರುವಾರ (ಇಂದು) ಆರಂಭವಾಗಲಿರುವ ನಾಲ್ಕನೇ ಟಿ-20 ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ ವಿರುದ್ಧ ಹುಮ್ಮಸ್ಸಿನಿಂದ ಕಣಕ್ಕಿಳಿಯಲಿದ್ದು, ಸರಣಿಯಲ್ಲಿ ಮುನ್ನಡೆ ಸಾಧಿಸುವ ತವಕಲ್ಲಿದೆ. ಉಪ ನಾಯಕ ಶುಭಮನ್ ಗಿಲ್ ಅವರೂ ದೊಡ್ಡ ಇನ್ನಿಂಗ್ಸ್‌ನ ನಿರೀಕ್ಷೆಯಲ್ಲಿದ್ದಾರೆ.

ಐದು ಪಂದ್ಯಗಳ ಸರಣಿ ಸದ್ಯ 1-1 ಸಮಬಲವಾಗಿದೆ. ಮೊದಲ ಪಂದ್ಯ ಮಳೆಯ ಪಾಲಾಗಿತ್ತು. ಅತ್ಯುತ್ತಮ ಲಯದಲ್ಲಿರುವ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಅವರ ಅನು ಪಸ್ಥಿತಿ ಭಾರತ ತಂಡಕ್ಕೆ ನೆರವಾಗಿತ್ತು. ಆಸ್ಟ್ರೇಲಿಯಾ ತಂಡವು 186 ರನ್‌ಗಳ ಉತ್ತಮ ಮೊತ್ತ ರಕ್ಷಿಸಲು ವಿಫಲವಾಗಿತ್ತು. ಆ್ಯಷಸ್‌ಗೆ ಸಜ್ಜಾಗಲು ಅವರನ್ನು ಸರಣಿಯ ಮೊದಲ ಎರಡು ಪಂದ್ಯಗಳಿಗೆ ಮಾತ್ರ ಆಯ್ಕೆ ಮಾಡಲಾಗಿತ್ತು.

ಇನ್ನೊಬ್ಬ ಪ್ರಮುಖ ಆಟಗಾರ ಟ್ರಾವಿಡ್ ಹೆಡ್ ಅವರು ಆ್ಯಷಸ್ ಸರಣಿಗೆ ಸಿದ್ದರಾಗಲು ಶೆಫೀಲ್ಡ್ ಶೀಲ್ಡ್ ಸರಣಿಯಲ್ಲಿ ಆಡಲಿರುವ ಕಾರಣ ಅವರೂ ನಾಲ್ಕನೇ ಪಂದ್ಯಕ್ಕೆ ಅಲಭ್ಯರಾಗಿದ್ದು, ಆತಿಥೇಯ ತಂಡ ಇನ್ನಷ್ಟು ದುರ್ಬಲವಾಗಿದೆ. ಹೀಗಾಗಿ ಭಾರತಕ್ಕೆ ಸರಣಿಯಲ್ಲಿ 2-1 ಮುನ್ನಡೆ ಪಡೆಯಲು ಸುವರ್ಣಾವಕಾಶವಿದೆ. ಅಂತಿಮ ಪಂದ್ಯ ಬ್ರಿಸ್ಬೇನ್‌ನ ಗ್ಯಾಬಾದಲ್ಲಿ ನಡೆಯಲಿದೆ.

ಈ ಹಿಂದಿನ ಪಂದ್ಯದಲ್ಲಿ ಭಾರತ ಎಂಟನೇ ಕ್ರಮಾಂಕದಲ್ಲಿ ಆಲ್‌ರೌಂಡರ್‌ಗೆ ಅವಕಾಶ ನೀಡಿದ್ದು, ಸಂಯೋಜನೆಗೆ ತಕ್ಕಂತೆ ಆಡಿತ್ತು. ಆದರೆ ತಂಡ ಗಿಲ್ ಅವರಿಂದ ಉತ್ತಮ ಬ್ಯಾಟಿಂಗ್ ನಿರೀಕ್ಷಿಸುತ್ತಿದೆ. ಕಳೆದ ಆರು ಪಂದ್ಯಗಳಲ್ಲಿ ಅವರು ಒಂದೂ ಅರ್ಧ ಶತಕ ಗಳಿಸಿಲ್ಲ. ಈ ಪ್ರವಾಸ ದಲ್ಲಿ ಏಕದಿನ ಪಂದ್ಯಗಳಿಂದ ಇಲ್ಲಿಯವರೆಗೆ ಅವರ ಗಳಿಕೆ... 10, 9, 24, ಔಟಾಗದೇ 37, 5 ಮತ್ತು 15.

ಕೆನ್‌ಬೆರಾದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಅವರು ಉತ್ತಮ ಲಯದಲ್ಲಿದ್ದಂತೆ ಕಂಡಿತ್ತು. ಅಲ್ಲಿ ನಾಯಕ ಸೂರ್ಯಕುಮಾರ್ ಜೊತೆ ಉತ್ತಮ ಆರಂಭ ನೀಡಿದ್ದರು. ಆದರೆ ಮಳೆ ಯಿಂದಾಗಿ ಆ ಪಂದ್ಯ ಹತ್ತು ಓವರುಗಳ ಮೊದಲೇ ಸ್ಥಗಿತಗೊಂಡಿತ್ತು. ಲಯ ಕಂಡುಕೊಳ್ಳಲು ಯತ್ನಿಸುತ್ತಿರುವ ಗಿಲ್ ಅವರು ಬೌನ್ಸ್ ಅಂದಾಜಿಸುವಲ್ಲಿ ಎಡವುತ್ತಿದ್ದಾರೆ. ಆದರೆ ಅಭಿಷೇಕ್ ಶರ್ಮಾ ತಮ್ಮ ಖ್ಯಾತಿಗೆ ತಕ್ಕಂತೆ ಬ್ಯಾಟ್ ಬೀಸುತ್ತಿದ್ದಾರೆ. ಒಂದು ಆಕರ್ಷಕ ಅರ್ಧ ಶತಕ ದೊಂದಿಗೆ ಅವರು ವಿಶ್ವದ ಅಗ್ರಮಾನ್ಯ ಬ್ಯಾಟರ್ ಪಟ್ಟಕ್ಕೆ ನ್ಯಾಯ ಒದಗಿಸಿದ್ದಾರೆ. ಆದರೆ ಸದ್ಯದಲ್ಲೇ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುವ ಟೆಸ್ಟ್ ಸರಣಿಗೆ ಸಜ್ಜಾಗಬೇಕಾಗಿರುವ ಗಿಲ್ ಅವರಿಗೆ ವಿಶ್ವಾಸ ಗಳಿಸಲು ಉತ್ತಮ ಇನಿಂಗ್ಸ್ ಆಡುವ ಅಗತ್ಯವಿದೆ. ಸಾಧಾರಣ ಫಾರ್ಮ್‌ನಲ್ಲಿ ರುವ ನಾಯಕ ಸೂರ್ಯ ಅವರೂ ಉತ್ತಮ ಇನಿಂಗ್ಸ್ ಆಡುವ ತವಕದಲ್ಲಿ ದ್ದಾರೆ.

ಮೂರನೇ ಪಂದ್ಯದಲ್ಲಿ ಅವಕಾಶ ಪಡೆದ ಅರ್ಷದೀಪ್ ಸಿಂಗ್ ತಮ್ಮ ಆಯ್ಕೆ ಸಮರ್ಥಿಸಿ ಕೊಂಡಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಗೆ ಸಜ್ಜಾಗಲು ಕುಲದೀಪ್ ಯಾದವ್ ಅವರನ್ನು ತವರಿಗೆ ಕಳುಹಿಸಲಾಗಿದೆ. ವಾಷಿಂಗ್ಟನ್ ಸುಂದರ್ ಬ್ಯಾಟಿಂಗ್‌ನಲ್ಲಿ ಉಪಯುಕ್ತ (49 ರನ್, 23ಎಸೆತ) ಕಾಣಿಕೆ ನೀಡಿದ್ದರು.

ಆಸ್ಟ್ರೇಲಿಯಾ ತಂಡವು ದೊಡ್ಡ ಮೊತ್ತಕ್ಕೆ ನಾಯಕ ಮಿಚೆಲ್ ಮಾರ್ಷ್ ಮತ್ತು ಟಿಮ್ ಡೇವಿಡ್ ಅವರ ಆಟವನ್ನೇ ಹೆಚ್ಚು ಅವಲಂಬಿಸಿದೆ. ಟ್ರಾವಿಸ್ ಹೆಡ್ ಗೈರುಹಾಜರಿಯಲ್ಲಿ ಮ್ಯಾಥ್ಯೂ ಶಾರ್ಟ್ ಅವರು ಮಾರ್ಷ್ ಜೊತೆ ಇನಿಂಗ್ಸ್ ಆರಂಭಿಸಬಹುದು. ಅನುಭವಿಗಳಿಲ್ಲದೇ ಬೌಲಿಂಗ್ ವಿಭಾಗದಲ್ಲಿ ಆಸ್ಟ್ರೇಲಿಯಾ ಸ್ವಲ್ಪ ಬಡವಾದಂತೆ ಕಾಣುತ್ತಿದೆ. ಪಂದ್ಯ ಆರಂಭ: ಮಧ್ಯಾಹ್ನ 1.45.

## ಐಸಿಸಿ ಟಿ-20 ರ್‍ಯಾಂಕಿಂಗ್: ಅಗ್ರಸ್ಥಾನದಲ್ಲಿ ಅಭಿಷೇಕ್ ಶರ್ಮಾ, ವರುಣ್ ಚಕ್ರವರ್ತಿ

• ಪ್ರಜೋದಯ ವರದಿ



**ದುಬೈ:** ಆಕ್ರಮಣಕಾರಿ ಆಟವಾಡುವ ಆರಂಭ ಆಟಗಾರ ಅಭಿಷೇಕ್ ಶರ್ಮಾ ಮತ್ತು ವಿಸ್ಮಯ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಬುಧವಾರ ಪ್ರಕಟವಾದ ಐಸಿಸಿ ಪುರುಷರ ಟಿ-20 ರ್‍ಯಾಂಕಿಂಗ್‌ನಲ್ಲಿ ಕ್ರಮವಾಗಿ ಬ್ಯಾಟರ್‌ಗಳ ಮತ್ತು ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನ ದಲ್ಲಿ ಮುಂದುವರಿದಿದ್ದಾರೆ.

ಅಭಿಷೇಕ್ 925 ರೇಟಿಂಗ್ ಪಾಯಿಂಟ್ಸ್‌ಗಳಿಸಿದ್ದು, ಇಂಗ್ಲೆಂಡ್‌ನ ಫಿಲ್ ಸಾಲ್ಟ್ ಮತ್ತು ತಿಲಕ್ ವರ್ಮಾ ಅವರಿಗಿಂತ ಮುಂದೆಯಿದ್ದಾರೆ. ಟಿ-20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಎಂಟನೇ ಸ್ಥಾನದಲ್ಲಿದ್ದು, ಅಗ್ರ 10ರಲ್ಲಿ ಸ್ಥಾನ ಪಡೆದಿರುವ ಭಾರತದ ಮತ್ತೊಬ್ಬ ಆಟಗಾರ ಎನಿಸಿದ್ದಾರೆ.

ಸ್ಪಿನ್ನರ್ ಚಕ್ರವರ್ತಿ ಅಗ್ರಸ್ಥಾನ ಅಬಾಧಿತವಾಗಿ ಉಳಿದಿದೆ. ವೆಸ್ಟ್ ಇಂಡೀಸ್‌ನ್ ಅಖೀಲ್ ಹುಸೇನ್ ಮತ್ತು ಅಫ್ಘಾನಿಸ್ತಾನದ ರಶೀದ್ ಖಾನ್ ನಂತರದ ಸ್ಥಾನಗಳಲ್ಲಿದ್ದಾರೆ. ಭಾರತದ ಇತರೆ ಯಾವುದೇ ಬೌಲರ್ ಅಗ್ರ 10ರಲ್ಲಿ ಸ್ಥಾನ ಪಡೆದಿಲ್ಲ.

ಭಾರತ ವಿರುದ್ಧ ಏಕದಿನ ಸರಣಿಯಲ್ಲಿ ಅಮೋಘ ಬೌಲಿಂಗ್ ಪ್ರದರ್ಶಿಸಿದ ಆಸ್ಟ್ರೇಲಿಯಾದ ವೇಗಿ ಜೋಶ್ ಹ್ಯಾಜಲ್‌ವುಡ್ ಎರಡು ಸ್ಥಾನ ಬಡ್ತಿ ಪಡೆದು ಹತ್ತನೇ ಸ್ಥಾನಕ್ಕೇರಿದ್ದಾರೆ.

ಆಲ್‌ರೌಂಡರ್‌ಗಳ ಯಾದಿಯಲ್ಲಿ ಹಾರ್ದಿಕ್ ಪಾಂಡ್ಯ ಅವರು ನಾಲ್ಕನೇ ಸ್ಥಾನದಲ್ಲಿದ್ದಾರೆ. ಅವರನ್ನು ಬಿಟ್ಟರೆ ಅಗ್ರ 10ರಲ್ಲಿ ಭಾರತದ ಯಾವುದೇ ಆಟಗಾರ ಸ್ಥಾನ ಪಡೆದಿಲ್ಲ. ಈ ವಿಭಾಗದಲ್ಲಿ ಪಾಕಿಸ್ತಾನದ ಸಯೀಮ್ ಅಯೂಬ್ ಅಗ್ರಸ್ಥಾನದಲ್ಲಿದ್ದಾರೆ. ಜಿಂಬಾಬ್ವೆಯ ಸಿಕಂದರ್ ರಝಾ ಮತ್ತು ವೆಸ್ಟ್ ಇಂಡೀಸ್‌ನ ರೋಸ್ಟನ್ ಚೇಸ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK